ಕೋಷ್ಟಕ 2.4

ಸಂಯೋಜನೆ	ವಸ್ತು (X)	ವಸ್ತು (Y)	MRS
A	1	12	–
B	2	8	1 : 4
C	3	5	1 : 3
D	4	3	1 : 2
E	5	2	1 : 1

ಕೋಷ್ಟಕ 2.4, ಅನುಭೋಗಿ ಒಂದು ಘಟಕದಷ್ಟು X ವಸ್ತುವನ್ನು ಪಡೆಯಲು ಬಯಸಿದರೆ ಆತ Y ವಸ್ತುವನ್ನು 4 ಘಟಕಗಳಷ್ಟು ತ್ಯಾಗ ಮಾಡಬೇಕಾಗುತ್ತದೆ. ಅದೇ ರೀತಿಯಲ್ಲಿ ಅನುಭೋಗಿ Y ವಸ್ತುವನ್ನು 3 ಘಟಕಗಳಷ್ಟು ಪಡೆಯಲು Y ವಸ್ತುವನ್ನು 3 ಘಟಕಗಳಷ್ಟು ತ್ಯಾಗಮಾಡ ಬೇಕಾಗುತ್ತದೆ. ಮುಂದೆ ಆತ X ವಸ್ತುವಿನ 4 ಘಟಕಗಳಷ್ಟನ್ನು ಹೊಂದಲು 2 ಘಟಕಗಳಷ್ಟು Y ವಸ್ತುವನ್ನು ತ್ಯಾಗ ಮಾಡ ಬೇಕಾಗುತ್ತದೆ. ಅಂದರೆ Y ಗೆ ಸಂಬಂಧಿಸಿದಂತೆ X ನ ಸೀಮಾಂತ ಬದಲಿಕೆಯ ದರವು ಇಳಿಮುಖವಾಗುತ್ತದೆ ಎಂಬುದನ್ನು ತೋರಿಸುತ್ತದೆ. MRS ಯನ್ನು ರೇಖಾಚಿತ್ರ 2.9 ರಲ್ಲಿ ತೋರಿಸಲಾಗಿದೆ.



ರೇಖಾಚಿತ್ರ 2.9 : ಇಳಿಮುಖ ಸೀಮಾಂತ ಬದಲಿಕೆಯ ದರ ನಿಯಮ

ರೇಖಾಚಿತ್ರ 2.9 ಇಳಿಮುಖ ಸೀಮಾಂತ ಬದಲಿಕೆಯ ದರವನ್ನು ವ್ಯಕ್ತಪಡಿಸುತ್ತದೆ. ಅಂದರೆ, ಅನುಭೋಗಿಯು A ಬಿಂದುವಿನಿಂದ B ಗೆ ಮತ್ತು C ನಿಂದ D ಗೆ ಚಲಿಸಿದಾಗ Y ವಸ್ತುವಿಗೆ ಸಂಬಂಧಿಸಿದಂತೆ X ನ ಸೀಮಾಂತ ಬದಲಿಕೆಯ ದರ ಇಳಿಮುಖವಾಗುತ್ತಾ ಹೋಗುತ್ತದೆ.

ಒಂದು ವಸ್ತುವಿಗೆ ಸಂಬಂಧಿಸಿದಂತೆ ಮತ್ತೊಂದು ವಸ್ತುವಿನ ಬದಲಿಕೆಯ ದರವು MRS ಎಂದು ಜನಪ್ರಿಯವಾಗಿದೆ. MRSನ್ನು ಲೆಕ್ಕಾಚಾರ ಮಾಡಲು ಈ ಕೆಳಗಿನ ಸೂತ್ರವನ್ನು ಬಳಸಲಾಗುತ್ತದೆ.

$$MRS_{xy} = \frac{\Delta Y}{\Delta X}$$

$$= \frac{4}{1} = 4$$ (ಕೋಷ್ಟಕ 2.4ರ ಪ್ರಕಾರ)

ಔದಾಸೀನ್ಯ ವಕ್ರರೇಖೆಯ ಲಕ್ಷಣಗಳು (Properties of Indifference Curve) : ಔದಾಸೀನ್ಯ ವಕ್ರರೇಖೆಯು ಕೆಲವು ಪ್ರಮುಖ ಲಕ್ಷಣಗಳನ್ನು ಹೊಂದಿದೆ.



ರೇಖಾಚಿತ್ರ 2.10

1) ಎತ್ತರದ ಔದಾಸೀನ್ಯ ವಕ್ರರೇಖೆಯು ಕೆಳಭಾಗದ ಔದಾಸೀನ್ಯ ವಕ್ರರೇಖೆಗಿಂತ ಹೆಚ್ಚಿನ ಮಟ್ಟದ ತೃಪ್ತಿಯನ್ನು ಪ್ರತಿನಿಧಿಸುತ್ತದೆ. ಪ್ರತಿಯೊಬ್ಬ ಅನುಭೋಗಿ ತಾನು ಹೊಂದಿರುವ ಆದಾಯ ಮತ್ತು ಸರಕುಗಳ ಬೆಲೆಗಳಿಂದ ಅವಕಾಶವಾದರೆ ಎತ್ತರ ಮಟ್ಟದ ಔದಾಸೀನ್ಯ ವಕ್ರರೇಖೆಯ ತಲುಪಲು ಪ್ರಯತ್ನಿಸುತ್ತಾನೆ.

ರೇಖಾಚಿತ್ರ 2.10 ರಲ್ಲಿ R ಬಿಂದು S ಬಿಂದುವಿಗಿಂತ ಹೆಚ್ಚು ತೃಪ್ತಿಯನ್ನು ವ್ಯಕ್ತಪಡಿಸುವುದರಿಂದ S ಗಿಂತ R ಬಿಂದುವಿನ ಕಡೆ ಅನುಭೋಗಿಯು ಹೆಚ್ಚು ಒಲವನ್ನು ತೋರುತ್ತಾನೆ.

2) ಔದಾಸೀನ್ಯ ವಕ್ರರೇಖೆ ಲಂಬರೇಖೆಯಂತಾಗಲಿ ಅಥವಾ ಸಮತಲ ರೇಖೆಯಂತಾಗಲಿ ಇರಲು ಸಾಧ್ಯವಿಲ್ಲ. ಒಂದು ವೇಳೆ ಈ ರೀತಿ ಇದ್ದಲ್ಲಿ ಅದು ಔದಾಸೀನ್ಯ ವಕ್ರರೇಖೆಯ ವಿಶ್ಲೇಷಣೆಯ ತತ್ವಗಳಿಗೆ ವಿರುದ್ಧವಾಗುತ್ತದೆ.

ರೇಖಾಚಿತ್ರ 2.11 ರಲ್ಲಿ R ಬಿಂದುವಿನ ಸಂಯೋಜನೆಯು S ಬಿಂದುವಿನ ಸಂಯೋಜನೆಗಿಂತ ಹೆಚ್ಚು ತೃಪ್ತಿಯನ್ನು ಪ್ರತಿನಿಧಿಸುತ್ತದೆ. ಅನುಭೋಗಿಯು X ವಸ್ತುವನ್ನು ತ್ಯಾಗ ಮಾಡದೆ Y ವಸ್ತುವನ್ನು NN^1 ರಷ್ಟು ಹೆಚ್ಚಿನ ಪ್ರಮಾಣದಲ್ಲಿ ಪಡೆಯುತ್ತಾನೆ. ಅನುಭೋಗಿ ಸಹಜವಾಗಿ S ಬಿಂದುವಿಗೆ ಬದಲಾಗಿ R ಬಿಂದುವನ್ನು ಆಯ್ಕೆ ಮಾಡಿಕೊಳ್ಳುತ್ತಾನೆ. ಇದು ಔದಾಸೀನ್ಯ ವಕ್ರರೇಖೆಯ ಮೂಲ ತತ್ವಕ್ಕೆ ವಿರುದ್ಧವಾಗಿದೆ. ಔದಾಸೀನ್ಯ ವಕ್ರರೇಖೆಯ ಮೇಲಿನ ಎಲ್ಲ ಬಿಂದುಗಳು ಒಂದೇ ಮಟ್ಟದ ತೃಪ್ತಿಯನ್ನು ನೀಡಲೇಬೇಕು.



ರೇಖಾಚಿತ್ರ 2.11



ರೇಖಾಚಿತ್ರ 2.12

ರೇಖಾಚಿತ್ರ 2.12 ರಲ್ಲಿ ಅನುಭೋಗಿಯು S ಬಿಂದುವಿನಲ್ಲಿ MM^1 ರಷ್ಟು ಹೆಚ್ಚಿಗೆ X ವಸ್ತುವನ್ನು Y ವಸ್ತುವಿನಲ್ಲಿ ಯಾವುದೇ ಘಟಕವನ್ನು ತ್ಯಾಗ ಮಾಡದೆ ಪಡೆಯುತ್ತಾನೆ. ಆದ್ದರಿಂದ ಅನುಭೋಗಿಯು R ಗಿಂತ S ಬಿಂದುವನ್ನು ಆಯ್ಕೆ ಮಾಡಿಕೊಳ್ಳುತ್ತಾನೆ. ಆದರೆ, ಔದಾಸೀನ್ಯ ವಕ್ರರೇಖೆಯು ವಿವಿಧ ಸಂಯೋಜನೆಗಳನ್ನು ಹೊಂದಿದ್ದು ಅವುಗಳು ಒಂದೇ ಮಟ್ಟದ ತೃಪ್ತಿಯನ್ನು ನೀಡಲೇಬೇಕು. ಆದ ಕಾರಣ, ಔದಾಸೀನ್ಯ ವಕ್ರರೇಖೆ ಸರಳ ಸಮತಲ ರೇಖೆಯಾಗಿರಲು ಸಾಧ್ಯವಿಲ್ಲ.

3) ಔದಾಸೀನ್ಯ ವಕ್ರ ರೇಖೆಯು ಕೆಳಮುಖ ಇಳಿಜಾರನ್ನು ಹೊಂದಿರುವ ಸರಳ ರೇಖೆಯಾಗಿರಲು ಸಾಧ್ಯವಿಲ್ಲ.

ರೇಖಾಚಿತ್ರ 2.13 ರಂತೆ ಔದಾಸೀನ್ಯ ವಕ್ರರೇಖೆ ಕೆಳಮುಖ ಇಳಿಜಾರನ್ನು ಹೊಂದಿದ್ದರೆ, ಆಗ MRS ಸ್ಥಿರವಾಗಿರುತ್ತದೆ. ಇದು ಅವಾಸ್ತವಿಕವಾಗಿದೆ.



ರೇಖಾಚಿತ್ರ 2.13



ರೇಖಾಚಿತ್ರ 2.14

4) ಔದಾಸೀನ್ಯ ವಕ್ರರೇಖೆಯ ಇಳಿಜಾರು ಧನಾತ್ಮಕವಾಗಿರಲು ಸಾಧ್ಯವಿಲ್ಲ. ಒಂದು ವೇಳೆ ಧನಾತ್ಮಕ ಇಳಿಜಾರನ್ನು ಹೊಂದಿದ್ದರೆ ಅದು ಅನುಭೋಗಿಯು ಎರಡು ಸರಕುಗಳನ್ನು ಹೆಚ್ಚು ಆಯ್ಕೆ ಮಾಡುತ್ತಾನೆ ಎಂದು ಸೂಚಿಸುತ್ತದೆ. ಆದರೆ ಇದು ಔದಾಸೀನ್ಯ ವಕ್ರರೇಖಾ ವಿಶ್ಲೇಷಣೆಯಲ್ಲಿ ಶಕ್ಯವಲ್ಲ. ಇದನ್ನು ಈ ಕೆಳಗಿನ ಚಿತ್ರದಲ್ಲಿ ವ್ಯಕ್ತಪಡಿಸಲಾಗಿದೆ.

ರೇಖಾಚಿತ್ರ 2.14 ರಲ್ಲಿ ಅನುಭೋಗಿ A ಬಿಂದುವಿನಿಂದ Bಗೆ ಮತ್ತು B ಬಿಂದುವಿನಿಂದ C ಗೆ ಚಲಿಸಿದಂತೆಲ್ಲಾ ಆತ ಎರಡೂ ಸರಕುಗಳನ್ನು ಹೆಚ್ಚು ಹೆಚ್ಚು ಪಡೆಯುತ್ತಾನೆಂದು ತಿಳಿಸುತ್ತದೆ.

5) ಔದಾಸೀನ್ಯ ವಕ್ರ ರೇಖೆಯು ಯಾವಾಗಲೂ ಮೂಲಕ್ಕೆ ಪೀನಮಧ್ಯವಾಗಿರುತ್ತದೆಯೇ ಹೊರತು ನಿಮ್ನಮಧ್ಯವಾಗಿರುವುದಿಲ್ಲ. ಔದಾಸೀನ್ಯ ವಕ್ರ ರೇಖೆಯು ನಿಮ್ನಮಧ್ಯವಾಗಿದ್ದ ಪಕ್ಷದಲ್ಲಿ ಸೀಮಾಂತ ಬದಲಿಕೆಯ ದರ ಹೆಚ್ಚಾಗುತ್ತದೆ. ಇದು ಅವಾಸ್ತವಿಕವಾದುದಾಗಿದೆ. ಯಾವುದೇ ವಸ್ತುಗಳ ಸಂಗ್ರಹ ಕಡಿಮೆಯಾದಂತೆ ಆ ವಸ್ತುಗಳ ಬಗ್ಗೆ ನಮ್ಮ ಮೋಹ ಹೆಚ್ಚಾಗುತ್ತದೆ. ಸೀಮಾಂತ ಬದಲಿಕೆಯ ದರ ಯಾವಾಗಲೂ ಇಳಿಮುಖವಾಗಿರಬೇಕು. ಔದಾಸೀನ್ಯ ವಕ್ರರೇಖೆ ಮೂಲಕ್ಕೆ ಪೀನಮಧ್ಯವಾಗಿದ್ದಾಗ ಮಾತ್ರ ಈ ಷರತ್ತು ಪೂರೈಸಲ್ಪಡುತ್ತದೆ.



ರೇಖಾಚಿತ್ರ 2.15



ರೇಖಾಚಿತ್ರ 2.16

6) ಔದ್ಯಾಸೀನ್ಯ ವಕ್ರರೇಖೆಯು ಉಬ್ಬು ತಗ್ಗುಗಳನ್ನು ಹೊಂದಿರಲು ಸಾಧ್ಯವಿಲ್ಲ. ರೇಖಾಚಿತ್ರ 2.16ರಲ್ಲಿ ತೋರಿಸಿರುವಂತೆ ಔದ್ಯಾಸೀನ್ಯ ವಕ್ರರೇಖೆಯು ಉಬ್ಬು ತಗ್ಗುಗಳನ್ನು ಹೊಂದಿದ್ದರೆ MRS ಏಕರೂಪವಾಗಿ (ಸ್ಥಿರವಾಗಿ) ಇಳಿಮುಖವಾಗುತ್ತಿಲ್ಲ ಎಂದರ್ಥ ಅಂದರೆ, ಅನುಭೋಗಿಯು ಅನಿಶ್ಚಿತವಾಗಿ ವರ್ತಿಸುತ್ತಾನೆ ಎಂಬುದಾಗಿ ತಿಳಿಯುತ್ತದೆ.

7) ಔದಾಸೀನ್ಯ ವಕ್ರರೇಖೆಯು ಎಡದಿಂದ ಬಲಕ್ಕೆ ಇಳಿಮುಖವಾಗಿರುತ್ತದೆ. ಔದಾಸೀನ್ಯ ವಕ್ರರೇಖೆಯು ಋಣಾತ್ಮಕ ಇಳಿಜಾರನ್ನು ಹೊಂದಿರುತ್ತದೆ. ಇದು ಔದಾಸೀನ್ಯ ರೇಖೆಯ ಪ್ರಮುಖ ಲಕ್ಷಣವಾಗಿದೆ. ಅನುಭೋಗಿ ಒಂದೇ ಮಟ್ಟದ ತೃಪ್ತಿಯಲ್ಲಿರಬೇಕಾದರೆ ಒಂದು ವಸ್ತುವಿನ ಪ್ರಮಾಣ ಹೆಚ್ಚಿದಾಗ ಮತ್ತೊಂದು ವಸ್ತುವಿನ ಪ್ರಮಾಣ ಕಡಿಮೆಯಾಗಲೇಬೇಕೆಂಬುದನ್ನು ಒತ್ತಿ ಹೇಳುತ್ತದೆ. ಇದನ್ನು 2.17 ಚಿತ್ರದಲ್ಲಿ ಸ್ಪಷ್ಟವಾಗಿ ವಿವರಿಸಲಾಗಿದೆ.



ರೇಖಾಚಿತ್ರ 2.17



ರೇಖಾಚಿತ್ರ 2.18

8) ಔದಾಸೀನ್ಯ ವಕ್ರರೇಖೆಗಳು ಸಮನಾಂತರವಾಗಿರಬೇಕಿಲ್ಲ. ಒಂದು ವೇಳೆ ಔದಾಸೀನ್ಯ ವಕ್ರರೇಖೆಗಳು ಸಮನಾಂತರ ವಾಗಿದ್ದರೆ, ಇಳಿಮುಖ ಸೀಮಾಂತ ಬದಲಿಕೆಯ ದರವು ಎಲ್ಲ ಔದಾಸೀನ್ಯ ರೇಖೆಗಳ ಮೇಲೆ ಒಂದೇ ರೀತಿಯಾಗಿರುತ್ತದೆ ಎಂದು ತಿಳಿಯುತ್ತದೆ.

ಅನುಭೋಗಿ ಎತ್ತರದ ಬಜೆಟ್ ರೇಖೆ ಮತ್ತು ಎತ್ತರದ ಔದಾಸೀನ್ಯ ರೇಖೆಯ (IC_3) ಕಡೆಗೆ ಮುನ್ನಡೆದಾಗ MRS ಇಳಿಮುಖವಾಗುತ್ತದೆ. ಆದರೆ ಅದು ಒಂದೇ ದರದಲ್ಲಿ ಇರಬೇಕಾಗಿಲ್ಲ ಬದಲಾಗಿ ಅದು ವಿಭಿನ್ನ ದರದಲ್ಲಿ ಇರಬಹುದಾಗಿದೆ.

9) ಔದಾಸೀನ್ಯ ವಕ್ರರೇಖೆಯು OX ಅಕ್ಷವನ್ನಾಗಲಿ ಅಥವಾ OY ಅಕ್ಷವನ್ನಾಗಲಿ ಸ್ಪರ್ಶಿಸುವುದಿಲ್ಲ. ಅಂದರೆ ಔದಾಸೀನ್ಯ ವಕ್ರರೇಖೆಯು ಈ ಎರಡೂ ಅಕ್ಷಗಳಲ್ಲಿ ಯಾವುದಾದರು ಒಂದನ್ನು ಸ್ಪರ್ಶಿಸಿದ್ದಲ್ಲಿ, ಅನುಭೋಗಿ X ಅಥವಾ Y ವಸ್ತುವನ್ನು ಪಡೆಯುತ್ತಿದ್ದಾನೆ ಎಂದರ್ಥ. ಆದರೆ ಇದು ಔದಾಸೀನ್ಯ ವಕ್ರರೇಖೆಯಲ್ಲಿ ಸಾಧ್ಯವಿಲ್ಲ.



ರೇಖಾಚಿತ್ರ 2.19A



ರೇಖಾಚಿತ್ರ 2.19B

ರೇಖಾಚಿತ್ರ 2.19 (A) ಯು ಅನುಭೋಗಿ A ಬಿಂದುವಿನಲ್ಲಿ X ವಸ್ತುವನ್ನು ಮಾತ್ರ ಹೊಂದಿದ್ದಾನೆ ಎಂದು ತಿಳಿಸುತ್ತದೆ. ರೇಖಾಚಿತ್ರ 2.19 (B) ಅನುಭೋಗಿ B ಬಿಂದುವಿನಲ್ಲಿ Y ವಸ್ತುವನ್ನು ಮಾತ್ರ ಹೊಂದಿದ್ದಾನೆ ಎಂದು ತೋರಿಸುತ್ತದೆ.

10) ಔದಾಸೀನ್ಯ ವಕ್ರರೇಖೆಗಳು ಪರಸ್ಪರ ಛೇದಿಸುವುದಿಲ್ಲ. ಎರಡು ಔದಾಸೀನ್ಯ ವಕ್ರರೇಖೆಗಳು ಎಂದೂ ಒಂದು ಇನ್ನೊಂದನ್ನು ಛೇದಿಸುವುದಿಲ್ಲ. ಏಕೆಂದರೆ, ಆ ಎರಡು ರೇಖೆಗಳು ಎರಡು ಸರಕುಗಳ ಸಂಯೋಜನೆಗಳ ವಿಭಿನ್ನ ಸಮೂಹವನ್ನು ಹೊಂದಿದ್ದು ಅವುಗಳು ಬೇರೆ ಬೇರೆ ತೃಪ್ತಿಯನ್ನು ವ್ಯಕ್ತಪಡಿಸುತ್ತವೆ. ಇದನ್ನು ಈ ಕೆಳಗಿನ ಚಿತ್ರವು ವಿವರಿಸುತ್ತದೆ.



ರೇಖಾಚಿತ್ರ 2.20

ರೇಖಾಚಿತ್ರ 2.20ರಲ್ಲಿ ಎರಡು ಔದಾಸೀನ್ಯ ರೇಖೆಗಳಾದ IC_1 ಮತ್ತು IC_2 A ಬಿಂದುವಿನಲ್ಲಿ ಪರಸ್ಪರ ಛೇದಿಸಿವೆ. ಹೀಗಾದಾಗ ಎರಡು ವಿಭಿನ್ನ ಔದಾಸೀನ್ಯ ರೇಖೆಗಳು A ಬಿಂದುವಿನಲ್ಲಿ ಸಮನಾದ ತೃಪ್ತಿಯನ್ನು ನೀಡುತ್ತವೆ ಎಂಬ ಕಲ್ಪನೆಯು ಅವಾಸ್ತವಿಕವಾದುದಾಗಿದೆ.

2.7 ಅನುಭೋಗಿಯ ಆದರ್ಶ ಆಯ್ಕೆ (ತುಷ್ಟಿಗುಣದ ಪರಮಾವಧಿ ಅಥವಾ ಅನುಭೋಗಿಯ ಸಮತೋಲನ) OPTIMAL CHOICE OF THE CONSUMER (UTILITY MAXIMISATION OR CONSUMER'S EQUILIBRIUM)

ಔದಾಸೀನ್ಯ ವಕ್ರರೇಖೆಯು ಆಯ್ಕೆ ಮತ್ತು ಒಲವನ್ನು ವರ್ಣಿಸುತ್ತದೆಂದು ನಮಗೆ ತಿಳಿಸುತ್ತದೆ. ಬಜೆಟ್ ರೇಖೆಯು ಪಾವತಿಸುವ ಸಾಮರ್ಥ್ಯವನ್ನು ವ್ಯಕ್ತಪಡಿಸುತ್ತದೆ. ಕೊಂಡುಕೊಳ್ಳುವ ಶಕ್ತಿಯಿದ್ದಾಗ ಮಾತ್ರ ಆಯ್ಕೆ ಮತ್ತು ಒಲವನ್ನು ಸಾಧಿಸಬಹುದಾಗಿದೆ. ಆದ್ದರಿಂದ, ಅನುಭೋಗಿಯ ಸಮತೋಲನವನ್ನು ಸಾಧಿಸಲು ಅಂದರೆ ತುಷ್ಟಿಗುಣವನ್ನು ಗರಿಷ್ಠಗೊಳಿಸಲು, ಅನುಭೋಗಿ ತನ್ನ ಬಜೆಟ್ ಮಿತಿಯೊಳಗೆ ಖರೀದಿಸಬಹುದಾದ ಸರಕುಗಳ ಸಂಯೋಜನೆಯನ್ನು ನಿರ್ಧರಿಸಲು ನಾವು ಔದಾಸೀನ್ಯ ವಕ್ರರೇಖೆ ಮತ್ತು ಬಜೆಟ್ ರೇಖೆ ಇವುಗಳನ್ನು ಸಂಯೋಜಿಸಬೇಕಾಗುತ್ತದೆ.

ಕಲ್ಪನೆಗಳು (Assumptions) : ಔದಾಸೀನ್ಯ ವಕ್ರರೇಖಾ ವಿಶ್ಲೇಷಣೆಯಲ್ಲಿ ಅನುಭೋಗಿಯ ಸಮತೋಲನ ಕಲ್ಪನೆಗಳು ಈ ಕೆಳಕಂಡಂತಿವೆ.

1) ಅನುಭೋಗಿಯ ಆದಾಯವನ್ನು ನೀಡಲಾಗಿರುತ್ತದೆ.
2) ಅನುಭೋಗಿಯು ವಿಚಾರವಂತನಾಗಿದ್ದು ತನ್ನ ಮಿತ ಆದಾಯದಿಂದ ಗರಿಷ್ಠ ತೃಪ್ತಿಯನ್ನು ಪಡೆಯಲು ಬಯಸುತ್ತಾನೆ.
3) ಸರಕು ಮತ್ತು ಸೇವೆಗಳ ಬೆಲೆಗಳು ಸ್ಥಿರವಾಗಿರುತ್ತದೆ.
4) ಅನುಭೋಗಿಗೆ ಔದಾಸೀನ್ಯ ನಕ್ಷೆಯ ಅರಿವು ಇರುತ್ತದೆ.
5) ಎಲ್ಲಾ ಸರಕುಗಳು ಏಕರೂಪವಾಗಿರುತ್ತವೆ ಮತ್ತು ಅವುಗಳನ್ನು ವಿಭಜಿಸಲು ಸಾಧ್ಯವಿದೆ.
6) ಒಂದು ಸಂಯೋಜನೆಯಿಂದ ಇನ್ನೊಂದು ಸಂಯೋಜನೆಗೆ ಸಾಗುವ ಷರತ್ತನ್ನು ಪೂರೈಸಲಾಗಿರುತ್ತದೆ. ಒಂದು ವೇಳೆ ಅನುಭೋಗಿ ಸಂಯೋಜನೆಗಳಿಗೆ ಈ ಕೆಳಗಿನ ರೀತಿಯಲ್ಲಿ ಸ್ಥಾನ ನಿರ್ಣಯ ಮಾಡುವ ಸಾಮರ್ಥ್ಯವನ್ನು ಹೊಂದಿರುತ್ತಾನೆ. **ಒಂದು ವೇಳೆ ಸಂಯೋಜನೆಗಳು** A>B **ಮತ್ತು** B>C **ಆದಾಗ** A>C **ಆಗುತ್ತದೆ.**
7) ಅನುಭೋಗಿ ಒಂದು ವಸ್ತುವಿಗಿಂತ ಮತ್ತೊಂದು ವಸ್ತುವಿನ ಬಗ್ಗೆ ಅಥವಾ ಎರಡು ವಸ್ತುಗಳ ಬಗೆಗೂ ಹೆಚ್ಚು ಒಲವನ್ನು ತೋರಿಸುವಂತಹ ಅತೃಪ್ತ ಭಾವವನ್ನು ಹೊಂದಿರುತ್ತಾನೆ. ಅನುಭೋಗಿಯ ಸಮತೋಲನವನ್ನು ರೇಖಾಚಿತ್ರ 2.21ರಲ್ಲಿ ವಿವರಿಸಲಾಗಿದೆ.



ರೇಖಾಚಿತ್ರ 2.21 ಅನುಭೋಗಿಯ ಸಮತೋಲನ

ರೇಖಾಚಿತ್ರ 2.21ರಲ್ಲಿ IC_1, IC_2, IC_3 ಮತ್ತು IC_4 ಎಂಬ ನಾಲ್ಕು ಔದಾಸೀನ್ಯ ರೇಖೆಗಳು ಮತ್ತು PQ ಎಂಬ ಬಜೆಟ್ ರೇಖೆಯಿದೆ. A ಯಿಂದ D ವರೆಗಿನ ಬಿಂದುಗಳಲ್ಲಿ ಯಾವುದು ಆದರ್ಶ ಬಿಂದುವಾಗಿದೆ. ಅಥವಾ ಯಾವ ಬಿಂದು ಗರಿಷ್ಠ ತುಷ್ಟಿಗುಣವನ್ನು ವ್ಯಕ್ತಪಡಿಸುತ್ತದೆ.

ಬಿಂದು B **ಆದರ್ಶವೇ?** ಇಲ್ಲ, A ಬಿಂದು ಎತ್ತರದ ಔದಾಸೀನ್ಯ ವಕ್ರರೇಖೆಯ ಮೇಲೆ ಇರುವುದರಿಂದ ಅದು B ಬಿಂದುವಿಗಿಂತ ಉತ್ತಮ. A ಬಿಂದು ಬಜೆಟ್ ರೇಖೆಯ ಮೇಲಿರುವುದರಿಂದ ಅನುಭೋಗಿ A ಬಿಂದುವನ್ನು ಆಯ್ಕೆ ಮಾಡಲೇಬೇಕಾಗುತ್ತದೆ.

ಬಿಂದು C **ಆದರ್ಶವೇ?** ಇಲ್ಲ, C ಬಿಂದು ಮತ್ತು B ಬಿಂದು ಒಂದೇ ಔದಾಸೀನ್ಯ ವಕ್ರರೇಖೆಯ ಮೇಲಿರುವುದರಿಂದ B ಬಿಂದುವಿನಂತೆ C ಬಿಂದು ಕೂಡ ಉತ್ತಮವಾಗಿದೆ.

ಆದಾಗ್ಯೂ A ಬಿಂದು B ಬಿಂದು ಗಿಂತ ಉತ್ತಮವಾಗಿದೆ. ಪರಿಣಾಮವಾಗಿ A ಬಿಂದು C ಬಿಂದುವಿಗಿಂತ ಹೆಚ್ಚು ಉತ್ತಮವಾಗಿರಲೇಬೇಕು.

ಬಿಂದು D **ಆದರ್ಶವೇ?** ಇಲ್ಲ, D ಬಿಂದು ಅತ್ಯಂತ ಎತ್ತರದ ಔದಾಸೀನ್ಯ ವಕ್ರರೇಖೆಯ ಮೇಲಿದ್ದು, ಇತರ ಯಾವುದೇ ಸಂಯೋಜನಾ ಬುಟ್ಟಿಗಳಿಗಿಂತ (ಅಂದರೆ A-C) ಉತ್ತಮವಾಗಿದೆ. ಆದ್ದರಿಂದ ಇದು ಹೆಚ್ಚಿನ ಮಟ್ಟದ ತೃಪ್ತಿಯನ್ನು ನೀಡುತ್ತದೆ. ಆದರೆ, D ಬಿಂದು ಬಜೆಟ್ ರೇಖೆಯ ಹೊರಗಿರುವುದರಿಂದ ಅನುಭೋಗಿಯು D ಸಂಯೋಜನೆಯನ್ನು ಕೊಳ್ಳಲು ಶಕ್ತನಿರುವುದಿಲ್ಲ. ಆದ್ದರಿಂದ D ಆದರ್ಶ ಆಯ್ಕೆಯ ಬಿಂದುವಲ್ಲ.

A ಬಿಂದು ಆದರ್ಶವೇ? ಹೌದು. ಔದಾಸೀನ್ಯ ರೇಖೆ ಮತ್ತು ಬಜೆಟ್ ರೇಖೆಯನ್ನು ನೀಡಲಾಗಿದ್ದು, A ಸಂಯೋಜನೆ ಮಾತ್ರ ಗರಿಷ್ಠ ಮಟ್ಟದ ತುಷ್ಟಿಗುಣವನ್ನು ನೀಡುತ್ತದೆ. ಇತರ ಎಲ್ಲಾ ಬಿಂದುಗಳು ಬಜೆಟ್ ರೇಖೆಯ ಮೇಲೆ ಅಥವಾ ಕೆಳಗೆ ಇದ್ದು ಹೆಚ್ಚು ಅಥವಾ ಕಡಿಮೆ ಮಟ್ಟದ ತೃಪ್ತಿಯನ್ನು ನೀಡುತ್ತವೆ. ಔದಾಸೀನ್ಯ ರೇಖೆಯು ಬಜೆಟ್ ರೇಖೆಯನ್ನು A ಬಿಂದುವಿನಲ್ಲಿ ಸ್ಪರ್ಶಿಸಿದೆ. ಹಾಗಾಗಿ, A ಬಿಂದು ಸಮತೋಲನ ಸ್ಥಿತಿಯಾಗಿದೆ. A ಬಿಂದು ಒಂದು ಮುಖ್ಯ ಲಕ್ಷಣವನ್ನು ಹೊಂದಿದೆ. ಈ ಬಿಂದುವಿನಲ್ಲಿ ಬಜೆಟ್ ರೇಖೆ ಮತ್ತು ಔದಾಸೀನ್ಯ ರೇಖೆಗಳೆರಡೂ ಒಂದೇ ರೀತಿಯ ಇಳಿಜಾರನ್ನು ಹೊಂದಿವೆ. ಇದನ್ನು ಈ ರೀತಿ ವ್ಯಕ್ತಪಡಿಸಬಹುದು.

$$\frac{Px}{Py} = \frac{MUx}{MUy}$$

ಈ ನಿಯಮವು, ಪಾವತಿ ಮಾಡುವ ಸಾಮರ್ಥ್ಯಕ್ಕೆ $\frac{Px}{Py}$ ಬದಲಿಸುವ ಇಚ್ಛೆಯು $\left(\frac{MUx}{MUy}\right)$ ಸಮನಾಗಿದೆ ಎಂದು ತಿಳಿಸುತ್ತದೆ.

ಹೀಗೆ, ಬೆಲೆಯ ರೇಖೆ ಔದಾಸೀನ್ಯ ರೇಖೆಯನ್ನು ಸ್ಪರ್ಶಿಸಿದಾಗ ಅಥವಾ X ಮತ್ತು Y ವಸ್ತುಗಳ ಸೀಮಾಂತ ಬದಲಿಕೆಯ ದರ, ಈ ಎರಡು ವಸ್ತುಗಳ ಬೆಲೆಗಳ ನಡುವಿನ ಬೆಲೆಯ ದರಕ್ಕೆ ಸಮನಾಗಿದ್ದಾಗ ಅನುಭೋಗಿಯು ಸಮತೋಲನದಲ್ಲಿರುವನು ಎಂದು ಹೇಳಬಹುದು.

ಔದಾಸೀನ್ಯ ವಕ್ರರೇಖಾ ಸಿದ್ಧಾಂತವು ಸ್ಥಾನದರ್ಶಕ ಸಿದ್ಧಾಂತವಾಗಿದ್ದು ವಸ್ತುಗಳ ಪರ್ಯಾಯ ಸಂಯೋಜನೆಗಳ ನಡುವೆ ಅನುಭೋಗಿಯ ಒಲವನ್ನು ಔದಾಸೀನ್ಯ ರೇಖೆಯೆಂಬ ಸಾಧನದ ಮೂಲಕ ತೋರಿಸುತ್ತದೆ. ಎಲ್ಲ ಸರಕುಗಳ ಸಂಯೋಜನೆಗಳನ್ನು ಸೇರಿಸುವ ರೇಖೆಯೇ ಔದಾಸೀನ್ಯ ರೇಖೆಯಾಗಿದೆ. ಈ ರೇಖೆಯ ಮೇಲಿನ ಎಲ್ಲಾ ಸಂಯೋಜನಾ ಬಿಂದುಗಳು ಅನುಭೋಗಿಗೆ ಸಮತೃಪ್ತಿ ಅಥವಾ ತುಷ್ಟಿಗುಣವನ್ನು ನೀಡುವುದರಿಂದ ಆತ ಸಂಯೋಜನೆಗಳ ನಡುವೆ ಉದಾಸೀನನಾಗಿರುತ್ತಾನೆ. ಅನುಭೋಗಿ ತನ್ನ ನಿರ್ಧಿಷ್ಟ ಹಣದ ಆದಾಯವನ್ನು ವಿನಿಯೋಗಿಸಿ ಮಾರುಕಟ್ಟೆಯ ನಿರ್ಧಿಷ್ಟ ಬೆಲೆಗಳಲ್ಲಿ ಕೊಂಡುಕೊಂಡ ಸರಕುಗಳಿಂದ ಅತ್ಯಧಿಕ ಮಟ್ಟದ ತೃಪ್ತಿಯನ್ನು ಹೊಂದಿದಾಗ ಆತ ಸಮತೋಲನದಲ್ಲಿರುತ್ತಾನೆ. ಆ ಸಮತೋಲನ ಬಿಂದುವಿನಲ್ಲಿ ಬಜೆಟ್ ರೇಖೆ ಔದಾಸೀನ್ಯ ರೇಖೆಯನ್ನು ಸ್ಪರ್ಶಿಸುತ್ತದೆ.

ಔದಾಸೀನ್ಯ ವಕ್ರರೇಖೆಯ ವಿಶ್ಲೇಷಣೆಯು ತುಷ್ಟಿಗುಣ ವಿಶ್ಲೇಷಣೆಗಿಂತ ಶ್ರೇಷ್ಠವಾಗಿದೆ.

1. ಔದಾಸೀನ್ಯ ವಕ್ರರೇಖೆಯು ತುಷ್ಟಿಗುಣವನ್ನು ಅಳತೆ ಮಾಡಬಹುದೆಂಬ ಕಲ್ಪನೆಯಿಂದ ಮುಕ್ತಿ ನೀಡುತ್ತದೆ.
2. ಇದು ಒಂದಕ್ಕಿಂತ ಹೆಚ್ಚು ವಸ್ತುಗಳನ್ನು ಏಕಕಾಲದಲ್ಲಿ ಅಧ್ಯಯನ ಮಾಡುತ್ತದೆ.
3. ಇದು ಹಣದ ಆದಾಯ ಸ್ಥಿರವಾಗಿರುತ್ತದೆ ಎಂದು ಭಾವಿಸುವುದಿಲ್ಲ.
4. ಇದು ಆದಾಯದ ಪರಿಣಾಮವನ್ನು ಬದಲೀ ಪರಿಣಾಮದಿಂದ ಬೇರ್ಪಡಿಸುತ್ತದೆ.

ಚಟುವಟಿಕೆ

1) ಯಾವುದಾದರೂ ಎರಡು ಸರಕುಗಳನ್ನು ಖರೀದಿಸಲು ನಿಮ್ಮ ಆದಾಯದ ಆಧಾರದ ಮೇಲೆ ಬಜೆಟ್ ರೇಖೆಯನ್ನು ತಯಾರಿಸಿ.

ಅಭ್ಯಾಸ

I. ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದು ವಾಕ್ಯದಲ್ಲಿ ಉತ್ತರಿಸಿ.

1. ತುಷ್ಟಿಗುಣ ಎಂದರೇನು?
2. ಇಳಿಮುಖ ಸೀಮಾಂತ ತುಷ್ಟಿಗುಣ ನಿಯಮವನ್ನು ಪರಿಚಯಿಸಿದವರಾರು?
3. ಔದಾಸೀನ್ಯ ವಕ್ರರೇಖೆಯನ್ನು ವ್ಯಾಖ್ಯಾನಿಸಿ.
4. ಬಜೆಟ್ ಗಣವನ್ನು ವ್ಯಾಖ್ಯಾನಿಸಿ.
5. ಬಜೆಟ್ ರೇಖೆಯನ್ನು ವ್ಯಾಖ್ಯಾನಿಸಿ.
6. "ಏಕಾತ್ಮಕ ಒಲವು" ಎಂದರೇನು?
7. MRS ಎಂದರೇನು?
8. ಔದಾಸೀನ್ಯ ನಕ್ಷೆ ಎಂದರೇನು?
9. MRS ಯಾವಾಗಲು ಏಕೆ ಇಳಿಮುಖವಾಗುತ್ತಿರುತ್ತದೆ?

II. ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

1. ಒಟ್ಟು ತುಷ್ಟಿಗುಣ ಮತ್ತು ಸೀಮಾಂತ ತುಷ್ಟಿಗುಣದ ನಡುವಿನ ವ್ಯತ್ಯಾಸಗಳನ್ನು ಗುರುತಿಸಿ.
2. ತುಷ್ಟಿಗುಣ ಮತ್ತು ತೃಪ್ತಿಯ ನಡುವಿನ ವ್ಯತ್ಯಾಸಗಳೇನು?
3. ಸಂಖ್ಯಾಸೂಚಕ ವಿಧಾನ ಎಂದರೇನು?
4. ತುಷ್ಟಿಗುಣದ ಎರಡು ಲಕ್ಷಣಗಳನ್ನು ತಿಳಿಸಿ.
5. ಬಜೆಟ್ ರೇಖೆಯ ಲಕ್ಷಣಗಳಾವುವು?
6. ಇಳಿಮುಖ ಸೀಮಾಂತ ತುಷ್ಟಿಗುಣದ ಯಾವುದಾದರೂ ಎರಡು ಮಿತಿಗಳನ್ನು ಬರೆಯಿರಿ.
7. ಔದಾಸೀನ್ಯ ವಕ್ರರೇಖೆಯು ಮೂಲಕ್ಕೆ ನಿಮ್ನಮಧ್ಯ (Concave) ವಾಗಿರಲು ಸಾಧ್ಯವೇ? ಏಕೆ?
8. ಬಜೆಟ್ ರೇಖೆ ಮತ್ತು ಬಜೆಟ್ ಗಣದ ನಡುವಿನ ವ್ಯತ್ಯಾಸಗಳನ್ನು ಗುರುತಿಸಿ.

9. ಔದಾಸೀನ್ಯ ವಕ್ರರೇಖೆಯು ಎಡದಿಂದ ಬಲಕ್ಕೆ ಕೆಳಮುಖವಾಗಿ ಏಕೆ ಚಲಿಸುತ್ತದೆ?
10. ಔದಾಸೀನ್ಯ ವಕ್ರರೇಖೆಯೊಂದು ಉಬ್ಬುತಗ್ಗುಗಳಾಗಿದ್ದರೆ ಯಾವ ಅರ್ಥವನ್ನು ನೀಡುತ್ತದೆ?

III. **ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಹದಿನೈದು ವಾಕ್ಯಗಳಲ್ಲಿ ಉತ್ತರಿಸಿ.**

1. ತುಷ್ಟಿಗುಣ ವಿಶ್ಲೇಷಣೆಯ ಸಂಖ್ಯಾಸೂಚಕ ವಿಧಾನ ಮತ್ತು ಸ್ಥಾನದರ್ಶಕ ವಿಧಾನಗಳ ನಡುವಿನ ವ್ಯತ್ಯಾಸಗಳಾವುವು?
2. ಒಟ್ಟು ತುಷ್ಟಿಗುಣ ಮತ್ತು ಸೀಮಾಂತ ತುಷ್ಟಿಗುಣದ ನಡುವಿನ ವ್ಯತ್ಯಾಸಗಳನ್ನು ಉದಾಹರಣೆಯೊಂದಿಗೆ ವಿವರಿಸಿ.
3. ಬಜೆಟ್ ರೇಖೆ ಮತ್ತು ಬಜೆಟ್ ಗಣವನ್ನು ಉದಾಹರಣೆಯೊಂದಿಗೆ ವಿವರಿಸಿ.
4. ಔದಾಸೀನ್ಯ ವಕ್ರರೇಖೆಯ ಯಾವುದಾದರೂ ಐದು ಲಕ್ಷಣಗಳನ್ನು ವಿವರಿಸಿ.

IV. **ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ನಲವತ್ತು ವಾಕ್ಯಗಳಲ್ಲಿ ಉತ್ತರಿಸಿ.**

1. ಇಳಿಮುಖ ಸೀಮಾಂತ ತುಷ್ಟಿಗುಣ ನಿಯಮವನ್ನು ಒಂದು ಸ್ಪಷ್ಟ ರೇಖಾಚಿತ್ರದ ಸಹಾಯದಿಂದ ವಿವರಿಸಿ.
2. ಔದಾಸೀನ್ಯ ವಕ್ರರೇಖೆ ಮತ್ತು ಔದಾಸೀನ್ಯ ನಕ್ಷೆಯನ್ನು ಅನುಸೂಚಿ ಮತ್ತು ರೇಖಾಚಿತ್ರದ ಸಹಾಯದಿಂದ ವಿವರಿಸಿ.
3. ಅನುಭೋಗಿಯ ಆದರ್ಶ ಆಯ್ಕೆ ಅಥವಾ ಅನುಭೋಗಿಯ ಸಮತೋಲನವನ್ನು ಔದಾಸೀನ್ಯ ವಕ್ರರೇಖಾ ವಿಶ್ಲೇಷಣೆಯ ಮೂಲಕ ವಿವರಿಸಿ.

* * *

ಅಧ್ಯಾಯ–3

ಬೇಡಿಕೆಯ ವಿಶ್ಲೇಷಣೆ

(DEMAND ANALYSIS)

"ಅನುಭೋಗಿಗಳ ತಾಳಕ್ಕೆ ತಕ್ಕಂತೆ ಉತ್ಪಾದಕರು ಕುಣಿಯುತ್ತಾರೆ"

– **ವೊನ್ನಾಕಾಟ್**

3.1 ಪೀಠಿಕೆ (INTRODUCTION)

ನಾವೆಲ್ಲ ತಿಳಿದಿರುವಂತೆ, ಮಾನವನ ಬಯಕೆಗಳು ಅಪರಿಮಿತವಾಗಿವೆ, ಆದರೆ ಈ ಬಯಕೆಗಳನ್ನು ತೃಪ್ತಿಪಡಿಸಲು ಲಭ್ಯವಿರುವ ಸಂಪನ್ಮೂಲಗಳು ಕೊರತೆಯಲ್ಲಿವೆ. ಅನುಭೋಗಿಗಳು ತಮ್ಮ ಅಪರಿಮಿತ ಬಯಕೆಗಳನ್ನು ವಿವಿಧ ಉಪಯೋಗಗಳನ್ನು ಹೊಂದಿರುವ ಮಿತವಾದ ಸಂಪನ್ಮೂಲಗಳಿಂದ ತೃಪ್ತಿಪಡಿಸಿಕೊಳ್ಳಲು ಪ್ರಯತ್ನಿಸಿದಾಗ, ಆಯ್ಕೆಯ ಸಮಸ್ಯೆಗಳು ಉದ್ಭವವಾಗುತ್ತವೆ. ಇಂತಹ ಸನ್ನಿವೇಶದಲ್ಲಿ ಅನುಭೋಗಿಯು ಹೇಗೆ ವರ್ತಿಸುತ್ತಾನೆ? ಒಂದು ಸರಕನ್ನು ಕೊಳ್ಳುವ ಬಯಕೆಯು ಬೇಡಿಕೆಯಾಗುವುದೇ? ಬೇಡಿಕೆಯ ನಿರ್ಧಾರಕಗಳು ಯಾವುವು? ಸಾಮಾನ್ಯ ಮತ್ತು ಕೆಳದರ್ಜೆಯ ಸರಕುಗಳು ಎಂದರೇನು? ಸರಕೊಂದರ ಬೆಲೆಯಲ್ಲಿ ಬದಲಾವಣೆಯಾದಂತೆ ಅದರ ಬೇಡಿಕೆಯ ಪ್ರತಿಕ್ರಿಯೆಯನ್ನು ನಾವು ಹೇಗೆ ಅಳೆಯುತ್ತೇವೆ? ಈ ಅಧ್ಯಾಯವನ್ನು ಅಧ್ಯಯನ ಮಾಡಿದ ನಂತರ ನೀವು ಈ ಅಂಶಗಳಿಗೆ ಉತ್ತರಿಸಲು ಸಮರ್ಥರಾಗುವಿರಿ ಮತ್ತು ಅನುಭೋಗಿಯ ವರ್ತನೆಯನ್ನು ಅರ್ಥಮಾಡಿ ಕೊಳ್ಳುವಿರಿ.

3.2 ಬೇಡಿಕೆ – ಅರ್ಥ ಮತ್ತು ಅದರ ನಿರ್ಧಾರಕಗಳು (DEMAND – MEANING AND ITS DETERMINANTS)

ಸಾಮಾನ್ಯ ಅರ್ಥದಲ್ಲಿ ಬೇಡಿಕೆಯು ಇಚ್ಛೆಯನ್ನು ಸೂಚಿಸುತ್ತದೆ. ಸರಕನ್ನು ಹೊಂದುವ ಅಪೇಕ್ಷೆಯನ್ನು ಇಚ್ಛೆ ಎಂದು ಕರೆಯುತ್ತಾರೆ. ಆದರೆ ಕೇವಲ ಇಚ್ಛೆಯೊಂದೇ ಬೇಡಿಕೆಯಾಗಲಾರದು. ಉದಾಹರಣೆಗೆ, ಅನುಭೋಗಿಯೊಬ್ಬನು ಪುಸ್ತಕವನ್ನು ಕೊಳ್ಳುವ ಇಚ್ಛೆಯನ್ನು ಹೊಂದಿದ್ದಾನೆಂದು ಭಾವಿಸುವುದಾದರೆ, ಅವನ ಇಚ್ಛೆಯು ಪುಸ್ತಕವನ್ನು ಕೊಳ್ಳುವ



ಆಲ್ಫ್ರೆಡ್ ಮಾರ್ಷಲ್(1842–1924)ರವರು ಸಮಕಾಲೀನ ಆರ್ಥಿಕ ಚಿಂತನೆಯ ಅಭಿವೃದ್ಧಿಗೆ ಅಪಾರ ಕೊಡುಗೆಯನ್ನು ನೀಡಿದ್ದಾರೆ ಮತ್ತು ಇವರ **'ಅರ್ಥಶಾಸ್ತ್ರದ ತತ್ವಗಳು'** (Principles of Economics) ಎಂಬ ಪುಸ್ತಕವು ಸಮಾಜ ವಿಜ್ಞಾನದ ಪ್ರಸಿದ್ಧ ಗ್ರಂಥಗಳಲ್ಲಿ ಒಂದಾಗಿದೆ. ಮಾರ್ಷಲ್‌ರವರು ಅರ್ಥಶಾಸ್ತ್ರಕ್ಕೆ ಬೇಡಿಕೆಯ ಸಿದ್ಧಾಂತ, ಉತ್ಪಾದನೆಯ ಸಿದ್ಧಾಂತ, ವಿತರಣೆಯ ಸಿದ್ಧಾಂತ, ಸಮತೋಲನ ಸ್ಥಿತಿಗಳು, ಹಣಕಾಸಿನ ಸಿದ್ಧಾಂತ ಮುಂತಾದ ಹಲವಾರು ಪರಿಕಲ್ಪನೆಗಳನ್ನು ರೂಪಿಸಿ ಮತ್ತು ಅಭಿವೃದ್ಧಿಪಡಿಸಿದ್ದಾರೆ.

ಸಾಮರ್ಥ್ಯ ಮತ್ತು ಕೊಳ್ಳುವ ಮನಸ್ಸು ಹೊಂದಿರದ ಹೊರತು ಬೇಡಿಕೆಯಾಗಲಾರದು. ಆದುದರಿಂದ ಬೇಡಿಕೆಯು ಸಂಭವಿಸಬೇಕಾದರೆ ಅನುಭೋಗಿಯು ಮೂರು ಅಂಶಗಳನ್ನು ಹೊಂದಿರಬೇಕಾಗುತ್ತದೆ. ಅವುಗಳೆಂದರೆ,

1) ಸರಕನ್ನು ಕೊಳ್ಳುವ ಇಚ್ಛೆ,

2) ಕೊಳ್ಳುವ ಸಾಮರ್ಥ್ಯ, ಮತ್ತು

3) ಹಣ ಕೊಟ್ಟು ಕೊಳ್ಳುವ ಮನಸ್ಸು.

ಬೇಡಿಕೆಯು ಯಾವಾಗಲೂ ಒಂದು ನಿರ್ದಿಷ್ಟ ಸಮಯ ಮತ್ತು ನಿರ್ದಿಷ್ಟ ಬೆಲೆಯನ್ನು ಉಲ್ಲೇಖಿಸುತ್ತದೆ. ಆದುದರಿಂದ **ಒಂದು ನಿರ್ದಿಷ್ಟ ಸಮಯದಲ್ಲಿ, ನಿರ್ದಿಷ್ಟ ಬೆಲೆಯಲ್ಲಿ ಅನುಭೋಗಿಯೊಬ್ಬನು ಮಾರುಕಟ್ಟೆಯಲ್ಲಿ ಕೊಳ್ಳುವ ಸರಕೊಂದರ ಪ್ರಮಾಣವನ್ನು ಬೇಡಿಕೆ** ಎಂದು ವ್ಯಾಖ್ಯಾನಿಸಬಹುದಾಗಿದೆ.

ಅನುಭೋಗಿಯು ಕೊಳ್ಳಲು ನಿರ್ಧರಿಸುವ ಸರಕಿನ ಪ್ರಮಾಣವು, 1) ಸರಕಿನ ಬೆಲೆ, 2) ಇತರೆ ಸರಕುಗಳ ಬೆಲೆಗಳು, 3) ಅನುಭೋಗಿಯ ಆದಾಯ, 4) ಅವನ ಅಭಿರುಚಿಗಳು ಮತ್ತು ಆದ್ಯತೆ(ಒಲವು)ಗಳು ಮುಂತಾದುವುಗಳನ್ನು ಅವಲಂಬಿಸಿರುತ್ತದೆ. ಈ ಅಂಶಗಳನ್ನು **ಬೇಡಿಕೆಯ ನಿರ್ಧಾರಕಗಳು** ಎನ್ನುತ್ತಾರೆ. ಯಾವಾಗಲಾದರೂ ಒಂದು ಅಥವಾ ಅದಕ್ಕಿಂತ ಹೆಚ್ಚಿನ ಈ ಚಲಕಗಳಲ್ಲಿ ಬದಲಾವಣೆಗಳಾದರೆ, ಅನುಭೋಗಿಯು ಕೊಳ್ಳುವ ಸರಕಿನ ಪ್ರಮಾಣದಲ್ಲೂ ಬದಲಾವಣೆಯಾಗುತ್ತದೆ.

3.3 ಬೇಡಿಕೆ ಬಿಂಬಕ (DEMAND FUNCTION)

ಬೇಡಿಕೆ ಬಿಂಬಕವು ಬೇಡಿಕೆಯ ಪ್ರಮಾಣ ಮತ್ತು ಅದರ ನಿರ್ಧಾರಕಗಳ ನಡುವಿನ ಸಂಬಂಧವನ್ನು ತಿಳಿಸುತ್ತದೆ. ಇದನ್ನು ಈ ಮುಂದಿನಂತೆ ವ್ಯಕ್ತಪಡಿಸಬಹುದು.

$Qd = f(P, Pr, Y, T, \ldots)$

ಇಲ್ಲಿ Qd ಬೇಡಿಕೆಯ ಪ್ರಮಾಣವನ್ನು ಸೂಚಿಸುತ್ತದೆ. ಸರಕಿನ ಬೆಲೆಯನ್ನು P ಸೂಚಿಸಿದರೆ, Pr ಸಂಬಂಧಿತ ಸರಕುಗಳ ಬೆಲೆಗಳನ್ನು ಸೂಚಿಸುತ್ತದೆ, Y ಅನುಭೋಗಿಯ ಆದಾಯವನ್ನು ಸೂಚಿಸುತ್ತದೆ ಮತ್ತು T ಯು ಅಭಿರುಚಿ ಮತ್ತು ಆದ್ಯತೆಗಳನ್ನು ಸೂಚಿಸುತ್ತದೆ. ಇವುಗಳಲ್ಲಿ ಬೆಲೆಯು ಬೇಡಿಕೆಯ ಪ್ರಧಾನ ನಿರ್ಧಾರಕವಾಗಿದೆ. ಆದುದರಿಂದ ಬೇಡಿಕೆಯ ಬಿಂಬಕವನ್ನು $Qd = f(p)$ ಎಂದು ಬರೆಯಬಹುದು. ಇದು ಬೇಡಿಕೆಯ ಪ್ರಮಾಣ(Qd)ವು ಬೆಲೆ(p)ಯೊಂದಿಗೆ ಸಂಬಂಧವನ್ನು ಹೊಂದಿದೆ ಎಂದು ತಿಳಿಸುತ್ತದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಸರಕೊಂದರ ಬೇಡಿಕೆಯ ಪ್ರಮಾಣವು ಅದರ ಬೆಲೆಯ ಮೇಲೆ ಅವಲಂಬಿತವಾಗಿದೆ. ಇಲ್ಲಿ ಬೆಲೆ(p)ಯು ಸ್ವತಂತ್ರ ಚಲಕವಾಗಿದೆ ಮತ್ತು ಬೇಡಿಕೆ ಪ್ರಮಾಣ(Qd)ವು ಅವಲಂಬಿತ ಚಲಕವಾಗಿದೆ.

ಬಿಂಬಕ ಸಂಬಂಧವನ್ನು ಒಂದು ಸಮೀಕರಣ ರೂಪದಲ್ಲಿ ಬರೆದಾಗ, ಅದು ನಿಶ್ಚಿತ ರೂಪವನ್ನು ಪಡೆಯುತ್ತದೆ. ಅದೆಂದರೆ,

$Qd = a - bp$

ಇದು ಬೇಡಿಕೆ ಬಿಂಬಕದ ಪ್ರಮಾಣಿತ ರೂಪವಾಗಿದೆ. ಇಲ್ಲಿ p ಸರಕಿನ ಬೆಲೆಯಾಗಿದೆ ಮತ್ತು Qd ಬೇಡಿಕೆಯ ಪ್ರಮಾಣವಾಗಿದೆ. a ಮತ್ತು b ಸ್ಥಿರಾಂಕಗಳಾಗಿವೆ. ಇದು ಒಂದು ಸರಳರೇಖಾ ಬೇಡಿಕೆ ಬಿಂಬಕವಾಗಿದೆ. ಇಲ್ಲಿ a ಬಿಂಬಕದ ಗರಿಷ್ಟ ಮಿತಿಯನ್ನು ಸೂಚಿಸುತ್ತದೆ ಮತ್ತು $-b$ ಯು ಬಿಂಬಕದ ಇಳಿಜಾರನ್ನು (Slope of the function; $\left(\frac{\Delta q}{\Delta p}\right)$) ಸೂಚಿಸುತ್ತದೆ. ಸಾಮಾನ್ಯವಾಗಿ ಬೇಡಿಕೆ ಬಿಂಬಕವು ಋಣಾತ್ಮಕ ಇಳಿಜಾರನ್ನು(Negative slope) ಹೊಂದಿರುತ್ತದೆ. ಋಣಾತ್ಮಕ ಚಿಹ್ನೆ(–)ಯು ಬೆಲೆಯಲ್ಲಿನ ಬದಲಾವಣೆ ಮತ್ತು ಬೇಡಿಕೆಯಲ್ಲಿನ ಬದಲಾವಣೆಯ ನಡುವಿನ ವಿರುದ್ಧ

ಸಂಬಂಧ(Inverse relationship)ವನ್ನು ಸೂಚಿಸುತ್ತದೆ. ಚಲಕಗಳ ಮೌಲ್ಯವನ್ನು ಪಡೆಯುವ ಸಲುವಾಗಿ, ಬಿಂಬಕವನ್ನು ಒಂದು ನಿರ್ದಿಷ್ಟ ರೂಪದಲ್ಲಿ ವ್ಯಕ್ತಪಡಿಸಬೇಕಾಗುತ್ತದೆ. ಉದಾಹರಣೆಗೆ,

$$Qd = 20 - 2p$$

ಇಲ್ಲಿ 20 ಸ್ಥಿರಾಂಕವಾಗಿದೆ. ಇದು ಬಿಂಬಕದ ಗರಿಷ್ಠ ಮಿತಿಯನ್ನು ಸೂಚಿಸುತ್ತದೆ. ಅಂದರೆ, ಬೆಲೆಯು ಶೂನ್ಯವಾಗಿದ್ದಾಗ, ಬೇಡಿಕೆಯು 20 ಇರುತ್ತದೆ. ಇದು ಬೇಡಿಕೆ ರೇಖೆಯು ox ಅಕ್ಷವನ್ನು ಛೇದಿಸುವ ಬಿಂದುವಾಗಿದೆ. –2 ಬೇಡಿಕೆ ರೇಖೆಯ ಇಳಿಜಾರನ್ನು ಸೂಚಿಸುತ್ತದೆ. ಅಂದರೆ, ಬೆಲೆಯು ಒಂದು ಘಟಕದಷ್ಟು ಬದಲಾವಣೆಯಾದರೆ, ಆಗ ಬೇಡಿಕೆಯು –2 ಘಟಕಗಳಷ್ಟು ಬದಲಾಗುತ್ತದೆ. –2 ಚಲಕ p ಯ ಜೊತೆಯಲ್ಲಿದೆ. ಆದುದರಿಂದ –2 ಅನ್ನು pಯ ಸಹಗುಣಕ ಎನ್ನುತ್ತಾರೆ. ಈಗ ಒಂದು ಚಲಕದ ಮೌಲ್ಯವನ್ನು ಕೊಟ್ಟಾಗ, ಮತ್ತೊಂದು ಚಲಕದ ಮೌಲ್ಯವನ್ನು ನಾವು ಪಡೆಯಬಹುದು.

ಸಮಸ್ಯೆ : Qd = 20 – 2p ಈ ಬೇಡಿಕೆ ಸಮೀಕರಣವು ಒಂದು ಸರಕಿನ ಮಾರುಕಟ್ಟೆ ಸನ್ನಿವೇಶವನ್ನು ಪ್ರತಿನಿಧಿಸುತ್ತದೆ ಎಂದು ಭಾವಿಸೋಣ. ಮಾರುಕಟ್ಟೆಯಲ್ಲಿ ಟೊಮೆಟೋ ಬೆಲೆಯು ವಿವಿಧ ಕಾಲಾವಧಿಯಲ್ಲಿ ಪ್ರತಿ ಕೆ.ಜಿ.ಗೆ ರೂ. 4, 5, 6, 7 ಮತ್ತು 8 ಇದ್ದರೆ, ಆಗ ಅನುಭೋಗಿಯು ವಿವಿಧ ಬೆಲೆಯಲ್ಲಿ ಕೊಳ್ಳುವ ಸರಕಿನ ಪ್ರಮಾಣವನ್ನು ಲೆಕ್ಕಾಚಾರ ಮಾಡಿರಿ ಮತ್ತು ಒಂದು ವೈಯಕ್ತಿಕ ಬೇಡಿಕೆ ಅನುಸೂಚಿಯನ್ನು ತಯಾರಿಸಿ.

ಪರಿಹಾರ : Qd = 20 – 2p ಸರಳರೇಖಾ ಬೇಡಿಕೆ ಸಮೀಕರಣವಾಗಿದೆ. ಇಲ್ಲಿ

p = 4 ಇದ್ದಾಗ, $Qd = 20 - 2 \times 4 = 20 - 8 = 12$

p = 5 ಇದ್ದಾಗ, $Qd = 20 - 2 \times 5 = 20 - 10 = 10$

p = 6 ಇದ್ದಾಗ, $Qd = 20 - 2 \times 6 = 20 - 12 = 8$

p = 7 ಇದ್ದಾಗ, $Qd = 20 - 2 \times 7 = 20 - 14 = 6$

p = 8 ಇದ್ದಾಗ, $Qd = 20 - 2 \times 8 = 20 - 16 = 4$

ವೈಯಕ್ತಿಕ ಬೇಡಿಕೆ ಅನುಸೂಚಿ

ಬೆಲೆ (p) (ರೂ.ಗಳಲ್ಲಿ)	ಬೇಡಿಕೆ (d) (ಕಿ.ಗ್ರಾಂ.ಗಳಲ್ಲಿ)
4	12
5	10
6	8
7	6
8	4

3.4 ಬೇಡಿಕೆಯ ನಿಯಮ (LAW OF DEMAND)

ಬೇಡಿಕೆಯ ನಿಯಮವು ಒಂದು ಸರಕಿನ ಬೆಲೆ ಮತ್ತು ಬೇಡಿಕೆಯ ಪ್ರಮಾಣದ ನಡುವಿನ ಸಂಬಂಧವನ್ನು ತಿಳಿಸುತ್ತದೆ. **ಬೇಡಿಕೆಯ ನಿಯಮವು ತಿಳಿಸುವುದೇನೆಂದರೆ, ಇತರೆ ಅಂಶಗಳು ಬದಲಾಗದೇ ಸ್ಥಿರವಾಗಿದ್ದು (Ceteris Paribus), ಒಂದು ಸರಕಿನ ಬೆಲೆಯು ಕಡಿಮೆಯಾದಾಗ, ಅದರ ಬೇಡಿಕೆಯು ಹೆಚ್ಚಾಗುತ್ತದೆ ಮತ್ತು ಬೆಲೆ ಹೆಚ್ಚಾದಾಗ, ಬೇಡಿಕೆ ಕಡಿಮೆಯಾಗುತ್ತದೆ.**

ಪ್ರೊಫೆಸರ್ ಸ್ಯಾಮ್ಯುಯಲ್‌ಸನ್‌ರವರ ಪ್ರಕಾರ ಬೇಡಿಕೆಯ ನಿಯಮವು ತಿಳಿಸುವುದೇನೆಂದರೆ, "ಇತರೆ ಅಂಶಗಳಲ್ಲಿ ಬದಲಾವಣೆಯಾಗದೇ ಇದ್ದಲ್ಲಿ, ಜನರು ಕಡಿಮೆ ಬೆಲೆಯಲ್ಲಿ ಹೆಚ್ಚು ಕೊಳ್ಳುವರು ಮತ್ತು ಹೆಚ್ಚಿನ ಬೆಲೆಯಲ್ಲಿ ಕಡಿಮೆ ಕೊಳ್ಳುವರು". ಇಲ್ಲಿ ಇತರೆ ಅಂಶಗಳೆಂದರೆ ಸಂಬಂಧಿತ ಸರಕುಗಳ ಬೆಲೆಗಳು, ಅನುಭೋಗಿಯ ಆದಾಯ,

ಅವನ ಅಭಿರುಚಿಗಳು ಮತ್ತು ಆದ್ಯತೆಗಳು ಇತ್ಯಾದಿ. ಈ ಎಲ್ಲಾ ಅಂಶಗಳು ಬದಲಾಗದೆ ಸ್ಥಿರವಾಗಿದ್ದಾಗ, ಅನುಭೋಗಿಯು ಕೊಳ್ಳುವ ಸರಕಿನ ಪ್ರಮಾಣವು ಸಂಪೂರ್ಣವಾಗಿ ಅದರ ಬೆಲೆಯ ಮೇಲೆ ಅವಲಂಬಿತವಾಗಿರುತ್ತದೆ. ಆದುದರಿಂದ ಬೇಡಿಕೆಯ ನಿಯಮದ ಪ್ರಕಾರ, ಬೆಲೆ ಮತ್ತು ಬೇಡಿಕೆಯ ಪ್ರಮಾಣಗಳು ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತವೆ.

ವೈಯಕ್ತಿಕ ಬೇಡಿಕೆ ಅನುಸೂಚಿ (Individual demand schedule) : ಬೇಡಿಕೆಯ ನಿಯಮವನ್ನು ಒಂದು ಉದಾಹರಣೆಯ ಮೂಲಕ ವಿವರಿಸಬಹುದು. ಮಾರುಕಟ್ಟೆಯಲ್ಲಿ ಅನುಭೋಗಿಯೊಬ್ಬನು ಟೊಮೆಟೋ ಕೊಳ್ಳಲು ಅಪೇಕ್ಷಿಸಿದ್ದಾನೆಂದು ಭಾವಿಸೋಣ. ಇದರ ಆಧಾರದ ಮೇಲೆ, ಒಂದು ವೈಯಕ್ತಿಕ ಬೇಡಿಕೆ ಅನುಸೂಚಿಯನ್ನು ತಯಾರಿಸಬಹುದು. ಅನುಭೋಗಿಯ ವೈಯಕ್ತಿಕ ಬೇಡಿಕೆ ಅನುಸೂಚಿಯು ಸರಕಿನ ವಿವಿಧ ಬೆಲೆಗಳಲ್ಲಿ ಅವನ ಬೇಡಿಕೆಯ ಪ್ರಮಾಣವನ್ನು ತಿಳಿಸುತ್ತದೆ. ಟೊಮೆಟೋದ ವೈಯಕ್ತಿಕ ಬೇಡಿಕೆಯನ್ನು ಬೇಡಿಕೆ ಅನುಸೂಚಿ(ಕೋಷ್ಟಕ–3.1)ಯಲ್ಲಿ ಕೊಡಲಾಗಿದೆ. ಬೇಡಿಕೆ ಅನುಸೂಚಿಯು ತಿಳಿಯಪಡಿಸುವುದೇನೆಂದರೆ, ಟೊಮೆಟೋದ ಬೆಲೆಯು ಪ್ರತಿ ಕೆ.ಜಿ.ಗೆ ರೂ. 4 ಇದ್ದಾಗ, ಬೇಡಿಕೆಯ ಪ್ರಮಾಣವು 12 ಕೆ.ಜಿ.ಗಳಷ್ಟಿದೆ. ಬೆಲೆಯು ರೂ. 5 ಕ್ಕೆ ಹೆಚ್ಚಳವಾದಾಗ, ಬೇಡಿಕೆ ಪ್ರಮಾಣವು 10 ಕೆ.ಜಿ.ಗಳಿಗೆ ಇಳಿಕೆಯಾಗಿದೆ ಮತ್ತು ಅದೇ ರೀತಿಯಲ್ಲಿ ಮುಂದುವರಿದಿದೆ. ಇದರಿಂದ ತಿಳಿಯುವುದೇನೆಂದರೆ, ಟೊಮೆಟೋ ಬೆಲೆಯು ಹೆಚ್ಚಾದಾಗ, ಅದರ ಬೇಡಿಕೆಯು ಕಡಿಮೆಯಾಗಿದೆ ಮತ್ತು ಬೆಲೆಯು ಇಳಿದಾಗ, ಬೇಡಿಕೆ ಹೆಚ್ಚಾಗಿದೆ.

ಕೋಷ್ಟಕ : 3.1 ವೈಯಕ್ತಿಕ ಬೇಡಿಕೆ ಅನುಸೂಚಿ

ಟೊಮೆಟೋ ಬೆಲೆ ಪ್ರತಿ ಕಿ.ಗ್ರಾಂ.ಗೆ (ರೂ.ಗಳಲ್ಲಿ)	ಟೊಮೆಟೋ ಬೇಡಿಕೆ (ಕಿ.ಗ್ರಾಂ.ಗಳಲ್ಲಿ)
8	4
7	6
6	8
5	10
4	12

ವೈಯಕ್ತಿಕ ಬೇಡಿಕೆ ರೇಖೆ(Individual demand curve) : ಬೇಡಿಕೆ ನಿಯಮವನ್ನು ರೇಖಾನಕ್ಷೆಯ ಮೂಲಕವೂ ಸಹ ವಿವರಿಸಬಹುದು. ಬೇಡಿಕೆ ಅನುಸೂಚಿಯ ರೇಖಾತ್ಮಕ ಮಂಡನೆಯು ನಮಗೆ ಬೇಡಿಕೆಯ ರೇಖೆಯನ್ನು ರಚಿಸಲು ಸಹಕಾರಿಯಾಗಿದೆ.

ರೇಖಾಚಿತ್ರ 3.1 ರಲ್ಲಿ ತೋರಿಸಿರುವಂತೆ, ಬೆಲೆಯನ್ನು(ಸ್ವತಂತ್ರ ಚಲಕ) oy ಅಕ್ಷದಲ್ಲೂ ಮತ್ತು ಬೇಡಿಕೆಯ ಪ್ರಮಾಣವನ್ನು (ಅವಲಂಬಿತ ಚಲಕ) ox ಅಕ್ಷದ ಮೇಲೂ ಗುರುತಿಸಲಾಗಿದೆ. DD ಯು ಬೇಡಿಕೆಯ ರೇಖೆಯಾಗಿದೆ. DD ರೇಖೆಯ ಮೇಲಿನ ವಿವಿಧ ಬಿಂದುಗಳು(e, f, g, h, i) ವಿವಿಧ ಬೆಲೆ ಮಟ್ಟಗಳು ಮತ್ತು ಅವುಗಳಿಗೆ ಸಂಬಂಧಿಸಿದ ಬೇಡಿಕೆಯ ಪ್ರಮಾಣವನ್ನು ಸೂಚಿಸುತ್ತವೆ. ಉದಾಹರಣೆಗೆ,



ರೇಖಾಚಿತ್ರ 3.1

e ಬಿಂದುವು ಸೂಚಿಸುವುದೇನೆಂದರೆ, ಟೊಮೆಟೋ ಬೆಲೆಯು ಪ್ರತಿ ಕೆ.ಜಿಗೆ ರೂ. 4 ಇದ್ದಾಗ, ಬೇಡಿಕೆಯ ಪ್ರಮಾಣವು 12 ಕೆ.ಜಿ.ಗಳಾಗಿತ್ತು ಮತ್ತು ಅದೇ ರೀತಿಯಲ್ಲಿ ಮುಂದುವರಿಯುತ್ತದೆ. ಬೇಡಿಕೆಯ ರೇಖೆಯು ಎಡದಿಂದ ಬಲಕ್ಕೆ ಇಳಿಮುಖವಾಗಿದೆ. ಬೇಡಿಕೆ ರೇಖೆಯ ಇಳಿಜಾರು ಬೆಲೆಗೆ ಸಂಬಂಧಿಸಿದಂತೆ ಬೇಡಿಕೆ ಪ್ರಮಾಣದಲ್ಲಾಗುವ ಬದಲಾವಣೆಯ ದರವನ್ನು ತಿಳಿಯಪಡಿಸುತ್ತದೆ. ಆದುದರಿಂದ ಈ ರೇಖೆಯು ಬೆಲೆ ಮತ್ತು ಬೇಡಿಕೆ ನಡುವಿನ ವಿರುದ್ಧ ಸಂಬಂಧವನ್ನು ಸೂಚಿಸುತ್ತದೆ.

ಬೇಡಿಕೆಯ ರೇಖೆಯು ಕೆಳಮುಖ ಇಳಿಜಾರು ಹೊಂದಲು ಕಾರಣಗಳು: ಇದಕ್ಕೆ ಈ ಕೆಳಗಿನ ನಾಲ್ಕು ಅಂಶಗಳು ಪ್ರಮುಖ ಕಾರಣಗಳಾಗಿವೆ. ಅವುಗಳೆಂದರೆ,

1. ಬೆಲೆ ಪರಿಣಾಮ
2. ಆದಾಯ ಪರಿಣಾಮ
3. ಬದಲಿ ಸರಕುಗಳ ಪರಿಣಾಮ
4. ಇಳಿಮುಖ ಸೀಮಾಂತ ತುಷ್ಟಿಗುಣ ನಿಯಮ.

1. ಬೆಲೆ ಬದಲಾವಣೆಯ ಕಾರಣದಿಂದ ಬೇಡಿಕೆಯಲ್ಲಾಗುವ ಬದಲಾವಣೆಯನ್ನು **ಬೆಲೆ ಪರಿಣಾಮ** ಎನ್ನುತ್ತಾರೆ. ಒಂದು ಸರಕಿನ ಬೆಲೆ ಇಳಿಕೆಯಾದಾಗ, ಆ ಸರಕು ಹೆಚ್ಚು ಅಗ್ಗವಾಗುತ್ತದೆ. ಆಗ ಅನುಭೋಗಿಯು ಆ ಸರಕನ್ನು ಹೆಚ್ಚು ಕೊಳ್ಳುತ್ತಾನೆ.
2. ಅನುಭೋಗಿಯೊಬ್ಬನ ಕೊಳ್ಳುವ ಶಕ್ತಿಯಲ್ಲಿನ (ನೈಜ ಆದಾಯದಲ್ಲಿನ) ಬದಲಾವಣೆಯ ಕಾರಣದಿಂದ ಬೇಡಿಕೆಯಲ್ಲಾಗುವ ಬದಲಾವಣೆಯನ್ನು **ಆದಾಯ ಪರಿಣಾಮ** ಎನ್ನುತ್ತಾರೆ. ಬೆಲೆ ಕಡಿಮೆಯಾದಾಗ ಅನುಭೋಗಿಯ ಕೊಳ್ಳುವ ಶಕ್ತಿ (ನೈಜ ಆದಾಯ) ಹೆಚ್ಚಾಗುತ್ತದೆ. ಇದರಿಂದ ಅನುಭೋಗಿಯು ಮೊದಲಿದ್ದ ಹಣದ ಮೊತ್ತದಲ್ಲಿ ಹೆಚ್ಚಿನ ಸರಕನ್ನು ಕೊಳ್ಳಲು ಸಮರ್ಥನಾಗುತ್ತಾನೆ.
3. ಬದಲಿ ಸರಕುಗಳ ಬೆಲೆಯಲ್ಲಿನ ಬದಲಾವಣೆಯ ಕಾರಣದಿಂದ ಬೇಡಿಕೆಯಲ್ಲಾಗುವ ಬದಲಾವಣೆಯನ್ನು **ಬದಲಿ ಸರಕುಗಳ ಪರಿಣಾಮ** ಎನ್ನುತ್ತಾರೆ. ಒಂದು ಸರಕಿನ ಬೆಲೆಯು ಕಡಿಮೆಯಾದಾಗ, ಅದರ ಬದಲಿ ಸರಕುಗಳಿಗೆ ಹೋಲಿಸಿದಲ್ಲಿ ಅದು ಹೆಚ್ಚು ಅಗ್ಗವೆನಿಸುತ್ತದೆ. ದುಬಾರಿ ಸರಕುಗಳಿಗೆ ಬದಲಾಗಿ ಅಗ್ಗದ ಸರಕುಗಳನ್ನು ಕೊಳ್ಳಲಾಗುತ್ತದೆ. ಉದಾಹರಣೆಗೆ ನಾವು ಚಹ ಮತ್ತು ಕಾಫಿ, ಈ ಎರಡು ಸರಕುಗಳನ್ನು ಪರಿಗಣಿಸಬಹುದಾಗಿದೆ. ಕಾಫಿಯ ಬೆಲೆಯಲ್ಲಿ ಇಳಿಕೆಯಾದರೆ ಚಹ ತುಲನಾತ್ಮಕವಾಗಿ ದುಬಾರಿಯೆನಿಸುತ್ತದೆ. ಇದರ ಪರಿಣಾಮವಾಗಿ ಚಹದ ಬೆಲೆಯಲ್ಲಿ ಬದಲಾವಣೆಯಾಗದಿದ್ದರೂ ಅದಕ್ಕೆ ಬದಲಾಗಿ ಕಾಫಿಯ(ಕಡಿಮೆ ಬೆಲೆಯ ಸರಕು) ಬೇಡಿಕೆ ಹೆಚ್ಚಾಗುತ್ತದೆ.
4. **ಇಳಿಮುಖ ಸೀಮಾಂತ ತುಷ್ಟಿಗುಣ ನಿಯಮ**ದ ಪ್ರಕಾರ ಅನುಭೋಗಿಯು ಒಂದು ಸರಕಿನ ಘಟಕಗಳನ್ನು ಹೆಚ್ಚು ಹೆಚ್ಚು ಕೊಳ್ಳುತ್ತಾ ಹೋದಂತೆ, ಆ ಸರಕಿನ ಸೀಮಾಂತ ತುಷ್ಟಿಗುಣವು ಕಡಿಮೆಯಾಗುತ್ತಾ ಹೋಗುತ್ತದೆ. ಆದುದರಿಂದ ಅವನು ಸರಕಿನ ಬೆಲೆ ಕಡಿಮೆಯಿದ್ದಾಗ ಮಾತ್ರ ಅದರ ಹೆಚ್ಚಿನ ಘಟಕಗಳನ್ನು ಕೊಳ್ಳುತ್ತಾನೆ. ಸರಕಿನ ಘಟಕಗಳ ಲಭ್ಯತೆಯು ಕಡಿಮೆಯಿದ್ದಾಗ, ತುಷ್ಟಿಗುಣ ಹೆಚ್ಚಿರುತ್ತದೆ ಮತ್ತು ಅನುಭೋಗಿಯು ಅದಕ್ಕೆ ಹೆಚ್ಚಿನ ಹಣ ಕೊಡಲು ಸಿದ್ಧನಿರುತ್ತಾನೆ. ಇದು ಬೆಲೆ ಕಡಿಮೆಯಿದ್ದಾಗ ಬೇಡಿಕೆ ಅಧಿಕವಾಗುತ್ತದೆ ಮತ್ತು ಬೆಲೆ ಅಧಿಕವಾದಾಗ ಬೇಡಿಕೆ ಕಡಿಮೆಯಾಗುತ್ತದೆ ಎಂಬುದನ್ನು ನಿರೂಪಿಸುತ್ತದೆ. ಆದುದರಿಂದ ಬೇಡಿಕೆ ರೇಖೆಯು ಕೆಳಮುಖ ಇಳಿಜಾರು ಹೊಂದಿರುತ್ತದೆ.

ಸಾಮಾನ್ಯ ಸರಕುಗಳು ಮತ್ತು ಕೆಳದರ್ಜೆಯ ಸರಕುಗಳು(Normal goods and Inferior goods): ನಾವು ಬೇಡಿಕೆ ಬಿಂಬಕದಲ್ಲಿ ಬೆಲೆ ಮತ್ತು ಬೇಡಿಕೆ ನಡುವಿನ ಸಂಬಂಧವನ್ನು ಅಭ್ಯಸಿಸಿದ್ದೇವೆ. ಈಗ ಅನುಭೋಗಿಯ ಆದಾಯ ಮತ್ತು ಸರಕೊಂದರ ಬೇಡಿಕೆ ನಡುವಿನ ಸಂಬಂಧವನ್ನು ಅಧ್ಯಯನ ಮಾಡೋಣ. ಅನುಭೋಗಿಯ ಆದಾಯದಲ್ಲಿನ ಹೆಚ್ಚಳ ದಿಂದಾಗಿ ಸರಕಿನ ಬೇಡಿಕೆಯ ಪ್ರಮಾಣವು ಹೆಚ್ಚಾಗಬಹುದು ಅಥವಾ ಕಡಿಮೆಯಾಗಬಹುದು. ಇದು ಕೊಳ್ಳುವ ಸರಕಿನ ಸ್ವರೂಪದ ಮೇಲೆ ಅವಲಂಬಿತವಾಗಿದೆ. ಬಹಳಷ್ಟು ಸರಕುಗಳಲ್ಲಿ, ಅನುಭೋಗಿಯ ಆದಾಯ ಹೆಚ್ಚಾದಂತೆ, ಬೇಡಿಕೆಯ ಪ್ರಮಾಣವೂ ಹೆಚ್ಚಾಗುತ್ತದೆ ಮತ್ತು ಅನುಭೋಗಿಯ ಆದಾಯ ಕಡಿಮೆಯಾದಂತೆ ಬೇಡಿಕೆಯು ಕಡಿಮೆಯಾಗುತ್ತದೆ. ಇಂತಹ ಸರಕುಗಳನ್ನು **ಸಾಮಾನ್ಯ ಸರಕುಗಳು** ಎನ್ನುತ್ತಾರೆ. ಇಲ್ಲಿ ಆದಾಯ ಮತ್ತು ಬೇಡಿಕೆಯ ನಡುವೆ ನೇರ ಸಂಬಂಧ (Direct relationship)ವಿದೆ. ಉದಾಹರಣೆಗೆ, ಬಹುತೇಕ ದಿನಬಳಕೆ ಸರಕುಗಳಾದ ತರಕಾರಿಗಳು, ಹಣ್ಣುಗಳು, ಬಟ್ಟೆ ಇತ್ಯಾದಿ.

ಹೀಗಿದ್ದರೂ, ಕೆಲವು ಸರಕುಗಳಿವೆ, ಅನುಭೋಗಿಯ ಆದಾಯ ಹೆಚ್ಚಾದಂತೆ, ಅವುಗಳ ಬೇಡಿಕೆ ಕಡಿಮೆಯಾಗುತ್ತದೆ ಮತ್ತು ಆದಾಯ ಕಡಿಮೆಯಾದಂತೆ ಬೇಡಿಕೆ ಹೆಚ್ಚಾಗುತ್ತದೆ. ಇಂತಹ ಸರಕುಗಳನ್ನು **ಕೆಳದರ್ಜೆಯ ಸರಕುಗಳು** ಎನ್ನುತ್ತಾರೆ. ಇಲ್ಲಿ ಆದಾಯ ಮತ್ತು ಬೇಡಿಕೆಯ ನಡುವೆ ವಿರುದ್ಧ ಸಂಬಂಧ(Inverse relationship)ವಿದೆ. ಉದಾಹರಣೆಗೆ ನವಣೆ, ಸಾವೆ, ಸಜ್ಜೆ, ಆರ್ಕ ಇತ್ಯಾದಿ ಒರಟು ಧಾನ್ಯಗಳು. ಈ ಸರಕುಗಳನ್ನು **ಗಿಫನ್ ಸರಕುಗಳು**(Giffen goods) ಎಂತಲೂ ಕರೆಯುತ್ತಾರೆ. ಏಕೆಂದರೆ, ಈ ಸರಕುಗಳ ಬೆಲೆ ಹೆಚ್ಚಾದಾಗ ಅವುಗಳ ಬೇಡಿಕೆಯೂ ಹೆಚ್ಚಾಗುತ್ತದೆ, ಬೆಲೆ ಇಳಿಕೆಯಾದಾಗ ಬೇಡಿಕೆ ಇಳಿಕೆಯಾಗುತ್ತದೆ.

ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ಒಂದು ಸರಕು ಕೆಲವರಿಗೆ ಸಾಮಾನ್ಯ ಸರಕಾಗಿರಬಹುದು ಮತ್ತು ಮತ್ತೆ ಕೆಲವರಿಗೆ ಅದೇ ಸರಕು ಕೆಳದರ್ಜೆಯ ಸರಕಾಗುತ್ತದೆ. ಇದು ಆದಾಯದ ವಿವಿಧ ಹಂತಗಳಿಗೆ ತಕ್ಕಂತೆ ಬದಲಾಗುತ್ತದೆ.

ಗಿಫನ್ನನ ವಿರೋಧಾಭಾಸ (Giffen's paradox)

ಸರ್. ರಾಬರ್ಟ್ ಗಿಫನ್, ಒಬ್ಬ ಐರಿಷ್ ಅರ್ಥಶಾಸ್ತ್ರಜ್ಞ, ಈತನು ತನ್ನ ಸ್ವಂತ ಉದಾಹರಣೆಯ (ಕೆಳದರ್ಜೆಯ ಸರಕುಗಳು) ಸಹಾಯದಿಂದ ಬೇಡಿಕೆಯ ನಿಯಮವನ್ನು ಖಂಡಿಸಿದನು. ಗಿಫನ್ನನ ವಿರೋಧಾಭಾಸವು ನಂಬಿರುವುದೇನೆಂದರೆ, **ಬೇಡಿಕೆಯು ಬೆಲೆಯಲ್ಲಿನ ಹೆಚ್ಚಳದ ಜೊತೆಗೆ ಬಲಗೊಳ್ಳುತ್ತದೆ ಅಥವಾ ಬೆಲೆಯಲ್ಲಿನ ಇಳಿಕೆಯ ಜೊತೆಗೆ ದುರ್ಬಲಗೊಳ್ಳುತ್ತದೆ**. ಅಂದರೆ, ಬೆಲೆ ಹೆಚ್ಚಾದಂತೆ ಬೇಡಿಕೆಯು ಹೆಚ್ಚಾಗುತ್ತದೆ ಮತ್ತು ಬೆಲೆ ಕಡಿಮೆಯಾದಂತೆ ಬೇಡಿಕೆಯು ಕಡಿಮೆಯಾಗುತ್ತದೆ. ಅವನು ಐರ್ಲೆಂಡಿನ ಬಡಜನರ ಉದಾಹರಣೆಯನ್ನು ಕೊಡುತ್ತಾನೆ. ಅವರು ಆಲೂಗಡ್ಡೆ ಮತ್ತು ಮಾಂಸವನ್ನು ತಮ್ಮ ದಿನಬಳಕೆಯ ಆಹಾರ ಸರಕುಗಳನ್ನಾಗಿ ಬಳಸುತ್ತಿರುತ್ತಾರೆ. ಆಲೂಗಡ್ಡೆ ಬೆಲೆ ಇಳಿದಾಗ, ಜನರು ಆಲೂಗಡ್ಡೆಗಳನ್ನು (ಕೆಳದರ್ಜೆಯ ಸರಕು) ಹೆಚ್ಚಾಗಿ ಕೊಳ್ಳುವುದಕ್ಕೆ ಬದಲಾಗಿ ಮಾಂಸವನ್ನು (ಶ್ರೇಷ್ಠ ದರ್ಜೆಯ ಸರಕು) ಕೊಳ್ಳಲು ಪ್ರಾರಂಭಿಸಿದರು. ಹಾಗಾಗಿ ಆಲೂಗಡ್ಡೆಯ ಬೆಲೆಯಲ್ಲಿ ಇಳಿಕೆಯಾದ ಕಾರಣದಿಂದಾಗಿ ಅದರ ಬೇಡಿಕೆಯೂ ಇಳಿಕೆಯಾಗಿತ್ತು. ಇದನ್ನೇ ಗಿಫನ್ನನ ವಿರೋಧಾಭಾಸ ಎನ್ನುತ್ತಾರೆ. ಕೆಳದರ್ಜೆಯ ಸರಕುಗಳನ್ನು ಗಿಫನ್ನನ ಸರಕುಗಳು ಎನ್ನುತ್ತಾರೆ.

ಪೂರಕ ಸರಕುಗಳು ಮತ್ತು ಬದಲೀ ಸರಕುಗಳು (Complementary and Substitute goods): ನಾವೀಗ ಒಬ್ಬ ಅನುಭೋಗಿಯ ಸರಕೊಂದರ ಬೇಡಿಕೆಯ ಪ್ರಮಾಣ ಮತ್ತು ಅದರ ಸಂಬಂಧಿತ ಸರಕಿನ ಬೆಲೆ ನಡುವಿನ ಸಂಬಂಧವನ್ನು ಅಧ್ಯಯನ ಮಾಡೋಣ. ಸಂಬಂಧಿತ ಸರಕೊಂದರ ಬೆಲೆಯಲ್ಲಿ ಹೆಚ್ಚಳವಾದಂತೆ ಅನುಭೋಗಿಯು ಕೊಳ್ಳುವ ಸರಕಿನ ಪ್ರಮಾಣವು ಹೆಚ್ಚಳವಾಗಬಹುದು ಅಥವಾ ಕಡಿಮೆಯಾಗಬಹುದು. ಇದು ಆ ಎರಡು ಸರಕುಗಳು ಪರಸ್ಪರ ಬದಲೀ ಸರಕುಗಳೇ ಅಥವಾ ಪೂರಕ ಸರಕುಗಳೇ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ.

ಒಂದು ನಿರ್ದಿಷ್ಠ ಬಯಕೆಯನ್ನು ತೃಪ್ತಿಪಡಿಸಿಕೊಳ್ಳಲು ಒಟ್ಟಿಗೆ ಅನುಭೋಗಿಸಲ್ಪಡುವ ಸರಕುಗಳನ್ನು ಪರಸ್ಪರ **ಪೂರಕ ಸರಕುಗಳು** ಎನ್ನುತ್ತಾರೆ. ಉದಾಹರಣೆಗೆ ಪೆನ್ನು ಮತ್ತು ಇಂಕು, ಚಹಾಪುಡಿ ಮತ್ತು ಸಕ್ಕರೆ, ಬೈಕು ಮತ್ತು ಪೆಟ್ರೋಲ್, ಸೆಲ್‌ಫೋನ್ ಮತ್ತು ಕರೆನ್ಸಿ ಮುಂತಾದುವು ಪರಸ್ಪರ ಪೂರಕ ಸರಕುಗಳಾಗಿವೆ. ಚಹಾಪುಡಿಯ ಬೆಲೆ ಕಡಿಮೆಯಾದಾಗ, ಸಕ್ಕರೆಯ ಬೇಡಿಕೆ ಹೆಚ್ಚಾಗುತ್ತದೆ ಮತ್ತು ಚಹಾಪುಡಿಯ ಬೆಲೆ ಹೆಚ್ಚಾದಾಗ ಸಕ್ಕರೆಯ ಬೇಡಿಕೆ ಕಡಿಮೆಯಾಗುತ್ತದೆ. ಇತರೆ ಪೂರಕ ಸರಕುಗಳ ಪ್ರಕರಣದಲ್ಲೂ ಹೀಗೆ ಆಗುತ್ತದೆ. ಒಂದು ಸರಕಿನ ಬೆಲೆ ಮತ್ತು ಅದರ ಪೂರಕ ಸರಕಿನ ಬೇಡಿಕೆ ನಡುವೆ ಪರಸ್ಪರ ವಿರುದ್ಧ ಸಂಬಂಧವಿರುತ್ತದೆ. ಅಂದರೆ, **ಒಂದು ಸರಕಿನ ಬೆಲೆ ಹೆಚ್ಚಾದಾಗ, ಅದರ ಪೂರಕ ಸರಕಿನ ಬೇಡಿಕೆ ಕಡಿಮೆಯಾಗುತ್ತದೆ.**

ಒಂದು ನಿರ್ದಿಷ್ಠ ಬಯಕೆಯನ್ನು ತೃಪ್ತಿಪಡಿಸಿಕೊಳ್ಳಲು ಒಂದು ಸರಕಿಗೆ ಬದಲಿಯಾಗಿ ಬಳಸಬಹುದಾದ ಸರಕುಗಳನ್ನು **ಬದಲೀ ಸರಕುಗಳು** ಎನ್ನುತ್ತಾರೆ. ಉದಾಹರಣೆಗೆ ಚಹ ಮತ್ತು ಕಾಫಿಯಂತಹ ಸರಕುಗಳನ್ನು ಒಟ್ಟಿಗೆ ಅನುಭೋಗಿಸುವುದಿಲ್ಲ. ಏಕೆಂದರೆ ಇವು ಪರಸ್ಪರ ಬದಲಿ ಸರಕುಗಳಾಗಿವೆ. ಚಹಾದ ಬೆಲೆ ಸ್ಥಿರವಾಗಿದ್ದು, ಕಾಫಿಯ ಬೆಲೆ ಹೆಚ್ಚಾದರೆ, ಅನುಭೋಗಿಯು ಚಹಾಕ್ಕೆ ಬದಲಾಗಬಹುದು ಮತ್ತು ಇದರಿಂದ ಚಹಾಕ್ಕೆ ಬೇಡಿಕೆ ಹೆಚ್ಚಾಗುತ್ತದೆ. ಕಾಫಿಯ ಬೆಲೆ ಕಡಿಮೆಯಾದರೆ, ಚಹಾದ ಬೇಡಿಕೆಯು ಕಡಿಮೆಯಾಗುತ್ತದೆ. ಒಂದು ಸರಕಿನ ಬೆಲೆ ಮತ್ತು ಅದರ ಬದಲಿ ಸರಕಿನ ಬೇಡಿಕೆಯ ನಡುವೆ ನೇರ ಸಂಬಂಧವಿದೆ. ಅಂದರೆ **ಒಂದು ಸರಕಿನ ಬೆಲೆ ಹೆಚ್ಚಾದಾಗ, ಅದರ ಬದಲಿ ಸರಕಿನ ಬೇಡಿಕೆಯೂ ಸಹ ಹೆಚ್ಚಾಗುತ್ತದೆ.** ಡೀಸೆಲ್ ಮತ್ತು ಗ್ಯಾಸ್, ವಿದ್ಯುತ್ ಮತ್ತು ಸೌರಶಕ್ತಿ, ಬಸ್ಸು ಮತ್ತು ರೈಲು ಇತ್ಯಾದಿಗಳು ಬದಲಿ ಸರಕುಗಳಿಗೆ ಉದಾಹರಣೆಗಳಾಗಿವೆ.

ಬೇಡಿಕೆ ರೇಖೆಯೊಂದಿಗಿನ ಚಲನೆಗಳು ಮತ್ತು ಬೇಡಿಕೆ ರೇಖೆಯಲ್ಲಿನ ಪಲ್ಲಟಗಳು (Movements along the demand curve and Shifts in the demand curve): ನಾವು ಈಗಾಗಲೇ ತಿಳಿದಿರುವಂತೆ, ಅನುಭೋಗಿಯೊಬ್ಬನ ಒಂದು ಸರಕಿನ ಬೇಡಿಕೆಯ ಪ್ರಮಾಣವು ಆ ಸರಕಿನ ಬೆಲೆ, ಇತರೆ ಸಂಬಂಧಿತ ಸರಕುಗಳ ಬೆಲೆಗಳು, ಅನುಭೋಗಿಯ ಆದಾಯ ಹಾಗೂ ಅವನ ಅಭಿರುಚಿ ಮತ್ತು ಆದ್ಯತೆಗಳನ್ನು ಅವಲಂಬಿಸಿದೆ. ನಾವು ಅನುಭೋಗಿಯ ಆದಾಯ, ಇತರೆ ಸಂಬಂಧಿತ ಸರಕುಗಳ ಬೆಲೆಗಳು, ಅವನ ಅಭಿರುಚಿ ಮತ್ತು ಆದ್ಯತೆಗಳು ಸ್ಥಿರವಾಗಿವೆ ಎಂಬ ಕಲ್ಪನೆಯ ಅಡಿಯಲ್ಲಿ ಬೇಡಿಕೆಯ ರೇಖೆಯನ್ನು ರಚಿಸಿದ್ದೇವೆ. ಈ ಅಂಶಗಳಲ್ಲಿ ಯಾವುದಾದರೊಂದರಲ್ಲಿ ಬದಲಾವಣೆಯಾದರೆ ಬೇಡಿಕೆಯ ರೇಖೆಯಲ್ಲಿ ಯಾವ ಬದಲಾವಣೆಯಾಗುತ್ತದೆ? ಇದನ್ನು ನಾವೀಗ ಚರ್ಚಿಸೋಣ.

ಬೇಡಿಕೆ ರೇಖೆಯೊಂದಿಗಿನ ಚಲನೆಗಳು : ನಮಗೆ ತಿಳಿದಿರುವಂತೆ, ಇತರೆ ಅಂಶಗಳು ಸ್ಥಿರವಿದ್ದಾಗ, ಒಂದು ಸರಕಿನ ಬೆಲೆ ಮತ್ತು ಅದರ ಬೇಡಿಕೆ ಪ್ರಮಾಣದ ನಡುವಿನ ಸಂಬಂಧವೇ ಬೇಡಿಕೆ ಬಿಂಬಕವಾಗಿದೆ. ಬೇಡಿಕೆ ಬಿಂಬಕದ ರೇಖಾತ್ಮಕ ಮಂಡನೆಯೇ ಬೇಡಿಕೆ ರೇಖೆಯೆನಿಸಿದೆ. ಬೆಲೆ ಕಡಿಮೆಯಿದ್ದಾಗ ಬೇಡಿಕೆ ಹೆಚ್ಚಿರುತ್ತದೆ ಮತ್ತು ಬೆಲೆ ಹೆಚ್ಚಿದ್ದಾಗ ಬೇಡಿಕೆ ಕಡಿಮೆಯಿರುತ್ತದೆ. ಹೀಗೆ ಬೆಲೆಯಲ್ಲಿನ ಯಾವುದೇ ಬದಲಾವಣೆಯು ಬೇಡಿಕೆಯ ರೇಖೆಯೊಂದಿಗಿನ ಚಲನೆಗೆ ದಾರಿಮಾಡಿಕೊಡುತ್ತದೆ.



ರೇಖಾಚಿತ್ರ 3.2 : ಬೇಡಿಕೆ ರೇಖೆಯೊಂದಿಗಿನ ಚಲನೆಗಳು

ನೀವು ರೇಖಾನಕ್ಷೆ 3.2ನ್ನು ಗಮನಿಸಿ. ಬೆಲೆಯು p ಯಿಂದ p_1 ಗೆ ಇಳಿಕೆಯಾದಾಗ, ಬೇಡಿಕೆಯು Q ಯಿಂದ Q_1 ಗೆ ವಿಸ್ತರಣೆಯಾಗಿದೆ. ಆದುದರಿಂದ ಬೇಡಿಕೆ ರೇಖೆಯು ಕೆಳಮುಖವಾಗಿ ಚಲಿಸುತ್ತದೆ. ಇದನ್ನು **ಬೇಡಿಕೆಯ ವಿಸ್ತರಣೆ** (Expansion of demand) ಎನ್ನುತ್ತಾರೆ. ಅರ್ದೇ ರೀತಿಯಲ್ಲಿ ಬೆಲೆಯು p ಯಿಂದ p_2ಗೆ ಹೆಚ್ಚಳವಾದಾಗ, ಬೇಡಿಕೆಯು Q ಯಿಂದ Q_2 ಗೆ ಕುಗ್ಗುತ್ತದೆ. ಇದರಿಂದ ಬೇಡಿಕೆ ರೇಖೆಯು ಮೇಲ್ಮುಖವಾಗಿ ಚಲಿಸುತ್ತದೆ. ಇದನ್ನು **ಬೇಡಿಕೆಯ ಕುಗ್ಗುವಿಕೆ** (Contraction of demand) ಎನ್ನುತ್ತಾರೆ.

ಬೇಡಿಕೆ ರೇಖೆಯಲ್ಲಿನ ಪಲ್ಲಟಗಳು : ಬೆಲೆಯನ್ನು ಹೊರತುಪಡಿಸಿ, ಇತರೆ ಯಾವುದೇ ಅಂಶಗಳಲ್ಲಾಗುವ ಬದಲಾವಣೆಯು ಬೇಡಿಕೆ ರೇಖೆಯಲ್ಲಿನ ಪಲ್ಲಟಗಳಿಗೆ ದಾರಿಮಾಡಿಕೊಡುತ್ತದೆ. ಅಂದರೆ, ಬೆಲೆ ಹೊರತಾದ ಇತರೆ ಅಂಶಗಳಲ್ಲಿನ ಬದಲಾವಣೆಯು ಬೇಡಿಕೆ ರೇಖೆಯಲ್ಲಿನ ಪಲ್ಲಟಗಳಿಗೆ ಕಾರಣವಾಗಿದೆ. ಉದಾಹರಣೆಗೆ ಅನುಭೋಗಿಯ ಆದಾಯದಲ್ಲಿನ ಬದಲಾವಣೆಯನ್ನು ಪರಿಗಣಿಸೋಣ.



ರೇಖಾಚಿತ್ರ 3.3 : ಬೇಡಿಕೆ ರೇಖೆಯಲ್ಲಿನ ಪಲ್ಲಟಗಳು

ಇತರೆ ಅಂಶಗಳು ಸ್ಥಿರವಿದ್ದು, ಒಬ್ಬ ಅನುಭೋಗಿಯ ಆದಾಯ ಹೆಚ್ಚಾದರೆ, ಪ್ರತಿ ಬೆಲೆಯಲ್ಲಿ ಸರಕಿನ ಬೇಡಿಕೆಯು ಬದಲಾಗುತ್ತದೆ ಮತ್ತು ಇದರಿಂದ ಬೇಡಿಕೆ ರೇಖೆಯು ಪಲ್ಲಟಗೊಳ್ಳುತ್ತದೆ. **ಸಾಮಾನ್ಯ ಸರಕುಗಳಲ್ಲಿ ಬೇಡಿಕೆ ರೇಖೆಯು ಬಲಗಡೆಗೆ ಪಲ್ಲಟಗೊಳ್ಳುತ್ತದೆ.** ಇದರ ಅರ್ಥ, ಆದಾಯ ಹೆಚ್ಚಾದಾಗ, ಸಾಮಾನ್ಯ ಸರಕುಗಳ ಬೇಡಿಕೆಯೂ ಸಹ ಹೆಚ್ಚಾಗುತ್ತದೆ. ರೇಖಾನಕ್ಷೆ 3.3 ಅನ್ನು ಗಮನಿಸಿ, ಬೇಡಿಕೆ ರೇಖೆಯು DD ಯಿಂದ D_1D_1ಗೆ ಪಲ್ಲಟವಾಗಿದೆ. **ಕೆಳದರ್ಜೆಯ ಸರಕುಗಳಲ್ಲಿ ಬೇಡಿಕೆ ರೇಖೆಯು ಎಡಗಡೆಗೆ ಪಲ್ಲಟಗೊಳ್ಳುತ್ತದೆ.** ಇದರ ಅರ್ಥ, ಆದಾಯ ಹೆಚ್ಚಾದಾಗ, ಕೆಳದರ್ಜೆಯ ಸರಕುಗಳಿಗೆ ಬೇಡಿಕೆ ಕಡಿಮೆಯಾಗುತ್ತದೆ. ರೇಖಾನಕ್ಷೆ 3.3 ರಲ್ಲಿ ಬೇಡಿಕೆ ರೇಖೆಯು DD ಯಿಂದ D_2D_2ಗೆ ಪಲ್ಲಟವಾಗಿದೆ.

ಅದೇ ರೀತಿಯಲ್ಲಿ, ಸಂಬಂಧಿಸಿದ ಇತರೆ ಸರಕುಗಳ ಬೆಲೆಗಳಲ್ಲಾಗುವ ಬದಲಾವಣೆಯೂ ಸಹ ಬೇಡಿಕೆ ರೇಖೆಯ ಪಲ್ಲಟಕ್ಕೆ ಕಾರಣವಾಗಿದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಒಂದು ಸಂಬಂಧಿತ ಸರಕಿನ ಬೆಲೆ ಬದಲಾದರೆ, ಅನುಭೋಗಿಯು ಕೊಳ್ಳಲು ಬಯಸುವ ಸರಕಿನ ಬೇಡಿಕೆಯು ಅದರ ಬೆಲೆಯ ಪ್ರತಿ ಹಂತದಲ್ಲಿ ಬದಲಾವಣೆಯಾಗುತ್ತದೆ. ಇದರಿಂದ ಬೇಡಿಕೆ ರೇಖೆಯಲ್ಲಿ ಪಲ್ಲಟವಾಗುತ್ತದೆ. ಒಂದು **ಬದಲೀ ಸರಕಿನ ಬೆಲೆಯಲ್ಲಿ ಹೆಚ್ಚಳವಾದರೆ, ಬೇಡಿಕೆ ರೇಖೆಯು ಬಲಗಡೆಗೆ ಪಲ್ಲಟಗೊಳ್ಳುತ್ತದೆ.** ಉದಾಹರಣೆಗೆ ಚಹಾದ ಬೆಲೆಯು ಸ್ಥಿರವಾಗಿದ್ದು, ಕಾಫಿಯ(ಚಹಾಕ್ಕೆ ಬದಲೀ ಸರಕು) ಬೆಲೆ ಹೆಚ್ಚಾದರೆ, ಅನುಭೋಗಿಗಳು ಚಹಾಕ್ಕೆ ವರ್ಗಾವಣೆಗೊಳ್ಳಬಹುದು ಮತ್ತು ಅದರಿಂದಾಗಿ ಚಹಾದ ಬೇಡಿಕೆ ಹೆಚ್ಚಾಗುತ್ತದೆ. ಆದುದರಿಂದ ಚಹಾದ ಬೇಡಿಕೆ ರೇಖೆಯು ಬಲಗಡೆಗೆ ಪಲ್ಲಟವಾಗುತ್ತದೆ.

ಮತ್ತೊಂದೆಡೆ, **ಪೂರಕ ಸರಕಿನ ಬೆಲೆಯಲ್ಲಿ ಏರಿಕೆಯಾದರೆ, ಬೇಡಿಕೆ ರೇಖೆಯು ಎಡಗಡೆಗೆ ಪಲ್ಲಟಗೊಳ್ಳುತ್ತದೆ.** ಉದಾಹರಣೆಗೆ ಬೈಕಿನ ಬೆಲೆಯಲ್ಲಿ ಏರಿಕೆಯಾದ ಕಾರಣದಿಂದ ಪೆಟ್ರೋಲಿನ ಬೇಡಿಕೆ ಕಡಿಮೆಯಾಗುತ್ತದೆ. ಇದರಿಂದ ಪೆಟ್ರೋಲಿನ ಬೇಡಿಕೆ ರೇಖೆಯು ಎಡಗಡೆಗೆ ಪಲ್ಲಟಗೊಳ್ಳುತ್ತದೆ.

ಬೇಡಿಕೆ ರೇಖೆಯು ಅನುಭೋಗಿಯ ಅಭಿರುಚಿಗಳು ಮತ್ತು ಆದ್ಯತೆಗಳಲ್ಲಿನ ಬದಲಾವಣೆಗಳಿಂದಲೂ ಸಹ ಪಲ್ಲಟಗೊಳ್ಳುತ್ತದೆ. ಅನುಭೋಗಿಯ ಆದ್ಯತೆಯು ಒಂದು ಸರಕಿನ ಪರವಾಗಿ ಬದಲಾವಣೆಯಾದಲ್ಲಿ ಆ ಸರಕಿನ ಬೇಡಿಕೆ ರೇಖೆಯು ಬಲಗಡೆಗೆ ಪಲ್ಲಟವಾಗುತ್ತದೆ. ಇದಕ್ಕೆ ಬದಲಾಗಿ ಅನುಭೋಗಿಯ ಆದ್ಯತೆಯಲ್ಲಿನ ಬದಲಾವಣೆಯು ಸರಕಿನ ವಿರುದ್ಧವಾಗಿದ್ದಲ್ಲಿ ಬೇಡಿಕೆ ರೇಖೆಯು ಎಡಗಡೆಗೆ ಪಲ್ಲಟವಾಗುತ್ತದೆ. ಉದಾಹರಣೆಗೆ ಬೇಸಗೆಯಲ್ಲಿ ತಂಪು ಪಾನೀಯಗಳ ಬೇಡಿಕೆ ರೇಖೆಯು ಬಲಗಡೆಗೆ ಪಲ್ಲಟಗೊಂಡರೆ, ಚಳಿಗಾಲದಲ್ಲಿ ಎಡಗಡೆಗೆ ಪಲ್ಲಟಗೊಳ್ಳುತ್ತದೆ.

ಮಾರುಕಟ್ಟೆ ಬೇಡಿಕೆ (Market demand)**:** ನಾವು ವೈಯಕ್ತಿಕ ಅನುಭೋಗಿಯ ಬೇಡಿಕೆಯನ್ನು ಅಧ್ಯಯನ ಮಾಡಿದೆವು. ಈಗ ಮಾರುಕಟ್ಟೆ ಬೇಡಿಕೆಯನ್ನು ಕುರಿತು ಅಭ್ಯಾಸ ಮಾಡೋಣ. ನಮಗೆ ತಿಳಿದಿರುವಂತೆ ಮಾರುಕಟ್ಟೆಯಲ್ಲಿ ಒಂದು ಸರಕಿಗೆ ಹಲವಾರು ಅನುಭೋಗಿಗಳಿರುತ್ತಾರೆ. ಆ ಸರಕಿಗಿರುವ ಮಾರುಕಟ್ಟೆ ಬೇಡಿಕೆಯನ್ನು ಕಂಡುಹಿಡಿಯುವುದು ಬಹಳ ಮುಖ್ಯವಾಗಿದೆ. **ಮಾರುಕಟ್ಟೆಯ ಒಂದು ನಿರ್ದಿಷ್ಟ ಬೆಲೆಯಲ್ಲಿ ಒಂದು ಸರಕಿಗಿರುವ ಎಲ್ಲಾ ಅನುಭೋಗಿಗಳ ಬೇಡಿಕೆಯನ್ನು ಒಟ್ಟುಗೂಡಿಸಿದರೆ ಆ ಸರಕಿನ ಮಾರುಕಟ್ಟೆ ಬೇಡಿಕೆಯಾಗುತ್ತದೆ.** ಇದು ವೈಯಕ್ತಿಕ ಬೇಡಿಕೆಗಳ ಒಟ್ಟು ಮೊತ್ತವಾಗಿದೆ. ಎಲ್ಲಾ ವೈಯಕ್ತಿಕ ಬೇಡಿಕೆ ಅನುಸೂಚಿಗಳನ್ನು ಅಡ್ಡಸಾಲಿನಲ್ಲಿ ಕೂಡುವ ಮೂಲಕ ಇದನ್ನು ಪಡೆಯಬಹುದು.

ನಮ್ಮ ಅನುಕೂಲಕ್ಕಾಗಿ ನಾವೀಗ ಮಾರುಕಟ್ಟೆಯಲ್ಲಿ ಒಂದು ಸರಕಿಗೆ ಕೇವಲ ಇಬ್ಬರು ಅನುಭೋಗಿಗಳಿದ್ದಾರೆಂದು ಭಾವಿಸೋಣ. ಅವರು A ಮತ್ತು B ಆಗಿರಲಿ. ಅವರಿಬ್ಬರ ವೈಯಕ್ತಿಕ ಬೇಡಿಕೆ ಅನುಸೂಚಿಗಳನ್ನು ಕೋಷ್ಟಕ 3.2 ರಲ್ಲಿ ಕೊಡಲಾಗಿದೆ. ಈ ಎರಡು ಅನುಸೂಚಿಗಳನ್ನು ಕೂಡುವ ಮೂಲಕ ನಾವು ಮಾರುಕಟ್ಟೆ ಬೇಡಿಕೆ ಅನುಸೂಚಿಯನ್ನು ಪಡೆಯಬಹುದು. ಹಾಗಾಗಿ ಸರಕಿನ ಪ್ರತಿ ಬೆಲೆಯಲ್ಲಿರುವ ಅನುಭೋಗಿಗಳಿಬ್ಬರ ಬೇಡಿಕೆಗಳನ್ನು ಕೂಡಿಸುವ ಮೂಲಕ ಸರಕಿಗೆ ಪ್ರತಿ ಬೆಲೆಯಲ್ಲಿನ ಮಾರುಕಟ್ಟೆ ಬೇಡಿಕೆಯನ್ನು ಪಡೆಯಲಾಗಿದೆ. ಮಾರುಕಟ್ಟೆಯಲ್ಲಿ ಒಂದು ಸರಕಿಗೆ ಇಬ್ಬರಿಗಿಂತ ಹೆಚ್ಚು ಅನುಭೋಗಿಗಳಿದ್ದರೆ, ಮಾರುಕಟ್ಟೆ ಬೇಡಿಕೆಯನ್ನು ಇದೇ ರೀತಿಯಲ್ಲಿ ಪಡೆಯಬಹುದು.

ಕೋಷ್ಟಕ–3.2 : ಮಾರುಕಟ್ಟೆ ಬೇಡಿಕೆ ಅನುಸೂಚಿ

Aನ ಬೇಡಿಕೆ ಅನುಸೂಚಿ + Bನ ಬೇಡಿಕೆ ಅನುಸೂಚಿ = ಮಾರುಕಟ್ಟೆ ಬೇಡಿಕೆ ಅನುಸೂಚಿ

ಬೆಲೆ	ಬೇಡಿಕೆ
4	12
5	10
6	8
7	6
8	4

ಬೆಲೆ	ಬೇಡಿಕೆ
4	16
5	14
6	12
7	10
8	8

ಬೆಲೆ	ಬೇಡಿಕೆ
4	28
5	24
6	20
7	16
8	12

ವೈಯಕ್ತಿಕ ಬೇಡಿಕೆ ರೇಖೆಗಳನ್ನು ಅಡ್ಡಸಾಲುಗಳಲ್ಲಿ ಕೂಡುವ ಮೂಲಕ ಒಂದು ಸರಕಿನ ಮಾರುಕಟ್ಟೆ ಬೇಡಿಕೆ ರೇಖೆಯನ್ನೂ ಸಹ ಪಡೆಯಬಹುದು. ಎರಡು ರೇಖೆಗಳನ್ನು ಒಗ್ಗೂಡಿಸುವ ಈ ವಿಧಾನಕ್ಕೆ **ಅಡ್ಡಸಾಲು ಸಂಕಲನ** (Horizontal summation) ಎನ್ನುತ್ತಾರೆ.



ರೇಖಾನಕ್ಷೆ 3.4 : ಮಾರುಕಟ್ಟೆ ಬೇಡಿಕೆ ರೇಖೆ

ರೇಖಾಚಿತ್ರ 3.4 ರಲ್ಲಿ D_AD_A ಮತ್ತು D_BD_B ರೇಖೆಗಳು A ಮತ್ತು B ಅನುಭೋಗಿಗಳ ವೈಯಕ್ತಿಕ ಬೇಡಿಕೆ ರೇಖೆಗಳಾಗಿವೆ. D_MD_M ಮಾರುಕಟ್ಟೆ ಬೇಡಿಕೆ ರೇಖೆಯಾಗಿದೆ.

ಎರಡು ಸರಳರೇಖಾ ಬೇಡಿಕೆ ಸಮೀಕರಣಗಳನ್ನು ಕೂಡುವುದು : ನಾವು ಎರಡು ವೈಯಕ್ತಿಕ ಬೇಡಿಕೆ ಪಟ್ಟಿಗಳನ್ನು ಮತ್ತು ಎರಡು ವೈಯಕ್ತಿಕ ಬೇಡಿಕೆ ರೇಖೆಗಳನ್ನು ಒಟ್ಟುಗೂಡಿಸುವ ವಿಧಾನವನ್ನು ತಿಳಿದೆವು. ಅದೇ ರೀತಿಯಲ್ಲಿ ಮಾರುಕಟ್ಟೆ ಬೇಡಿಕೆ ಸಮೀಕರಣವನ್ನು ಪಡೆಯಲು ಎರಡು ವೈಯಕ್ತಿಕ ಬೇಡಿಕೆ ಸಮೀಕರಣಗಳನ್ನು ಕೂಡಿಸಬಹುದು.

$Qd = 20 - 2p$ .... A ನ ಬೇಡಿಕೆ ಸಮೀಕರಣ

$Qd = 24 - 2p$ ....B ನ ಬೇಡಿಕೆ ಸಮೀಕರಣ

ಇಲ್ಲಿ, A ನ ಬೇಡಿಕೆ ಸಮೀಕರಣದಂತೆ, ಬೆಲೆಯು ಶೂನ್ಯವಿದ್ದಾಗ, ಬೇಡಿಕೆಯು 20 ಘಟಕಗಳಾಗುತ್ತದೆ. ಇದು ಆ ಬಿಂಬಕದ ಗರಿಷ್ಠ ಮಿತಿಯಾಗಿದೆ. ಇದೇರೀತಿ B ನ ಬೇಡಿಕೆ ಬಿಂಬಕದಲ್ಲಿ, ಬೆಲೆಯು ಶೂನ್ಯವಿದ್ದಾಗ ಬೇಡಿಕೆಯು 24 ಘಟಕಗಳಾಗುತ್ತದೆ. ಈ ಎರಡು ಸಮೀಕರಣಗಳನ್ನು ಕೂಡಿಸುವ ಮೂಲಕ ನಾವು ಮಾರುಕಟ್ಟೆ ಸಮೀಕರಣವನ್ನು ಪಡೆಯಬಹುದು. ಅದೆಂದರೆ,

$Qd = 44 - 4p$

ಇಲ್ಲಿ, ಬೆಲೆಯು ಶೂನ್ಯವಿದ್ದಾಗ, ಬೇಡಿಕೆಯು 44 ಆಗಿರುತ್ತದೆ. ಉದಾಹರಣೆಗೆ,

$Qd = 44 - 4p$

$= 44 - 4 \times 0$

$= 44 - 0 = 44$

ಬೇಡಿಕೆ ಶೂನ್ಯವಾಗಿದ್ದಾಗ, ಬೆಲೆಯು ರೂ. 11 ಮತ್ತು ಅದಕ್ಕಿಂತ ಹೆಚ್ಚಾಗುತ್ತದೆ. ಉದಾಹರಣೆಗೆ,

$Qd = 44 - 4p$

$0 = 44 - 4p$

$4p = 44$

$P = 44/4 = 11.$

3.5 ಬೇಡಿಕೆಯ ಸ್ಥಿತಿಸ್ಥಾಪಕತ್ವ (ELASTICITY OF DEMAND)

ನಾವು ಈಗಾಗಲೇ ಬೇಡಿಕೆ ನಿಯಮವನ್ನು ಚರ್ಚೆಮಾಡಿದ್ದೇವೆ. ಇದು ವಿವರಿಸುವುದೇನೆಂದರೆ, ಕಡಿಮೆ ಬೆಲೆಯಲ್ಲಿ ಬೇಡಿಕೆ ಹೆಚ್ಚಿರುತ್ತದೆ ಮತ್ತು ಹೆಚ್ಚಿನ ಬೆಲೆಯಲ್ಲಿ ಬೇಡಿಕೆ ಕಡಿಮೆಯಿರುತ್ತದೆ. ಇದರ ಅರ್ಥ, ಇದು ನಮಗೆ ಕೇವಲ ಬೆಲೆ ಮತ್ತು ಬೇಡಿಕೆ ಪ್ರಮಾಣದಲ್ಲಿನ ಬದಲಾವಣೆಯ ದಿಕ್ಕನ್ನು ಬಹಿರಂಗಪಡಿಸುತ್ತದೆ. ಆದರೆ ಇದು ಬೆಲೆ ಕಡಿಮೆಯಾದಾಗ ಬೇಡಿಕೆಯು ಎಷ್ಟು ಅಧಿಕ ಪ್ರಮಾಣದಲ್ಲಿ ಹೆಚ್ಚಳವಾಗುತ್ತದೆ ಅಥವಾ ಬೆಲೆ ಹೆಚ್ಚಾದಾಗ ಬೇಡಿಕೆಯು ಎಷ್ಟು ಅಧಿಕ ಪ್ರಮಾಣದಲ್ಲಿ ಕಡಿಮೆಯಾಗುತ್ತದೆ ಎಂಬುದನ್ನು ನಿರ್ದಿಷ್ಟಪಡಿಸುವುದಿಲ್ಲ. ಬೇಡಿಕೆಯ ಪ್ರಮಾಣವು ಕೇವಲ ಬೆಲೆ ಒಂದರ ಮೇಲೆ ಅವಲಂಬಿತವಾಗಿಲ್ಲ. ಅದು ಅನುಭೋಗಿಯ ಆದಾಯ ಮತ್ತು ಸಂಬಂಧಿತ ಸರಕುಗಳ ಬೆಲೆಗಳ ಮೇಲೆಯೂ ಸಹ ಅವಲಂಬಿತವಾಗಿದೆ. ಬೆಲೆ ಮತ್ತು ಬೇಡಿಕೆ, ಆದಾಯ ಮತ್ತು ಬೇಡಿಕೆ ಅಥವಾ ಸಂಬಂಧಿತ ಸರಕುಗಳ ಬೆಲೆ ಮತ್ತು ಬೇಡಿಕೆಯಲ್ಲಿನ ಪರಿಮಾಣಾತ್ಮಕ ಬದಲಾವಣೆಗಳು ಅಥವಾ ಬದಲಾವಣೆಗಳ ದರಗಳನ್ನು ಅರ್ಥಮಾಡಿಕೊಳ್ಳುವ ಸಲುವಾಗಿ, ನಾವು ಬೇಡಿಕೆ ಸ್ಥಿತಿಸ್ಥಾಪಕತ್ವದ ಪರಿಕಲ್ಪನೆಯನ್ನು ಅಧ್ಯಯನ ಮಾಡಬೇಕಾಗಿದೆ. **ಸ್ಥಿತಿಸ್ಥಾಪಕತ್ವ**ವು ಒಂದು ಪ್ರತಿಕ್ರಿಯೆಯ ಸೂಚಕವಾಗಿದೆ. ಇದು ಒಂದು ಚಲಕದಲ್ಲಾಗುವ ಬದಲಾವಣೆಗೆ ತಕ್ಕಂತೆ ಮತ್ತೊಂದು ಚಲಕದ ಪ್ರತಿಕ್ರಿಯೆಯನ್ನು ಅಳೆಯುತ್ತದೆ. ಆದುದರಿಂದ ಸಾಮಾನ್ಯವಾಗಿ **ಬೇಡಿಕೆಯ ಇತರೆ ನಿರ್ಧಾರಕ ಅಂಶಗಳು ಸ್ಥಿರವಿದ್ದು, ಅದರ ಒಂದು ನಿರ್ಧಾರಕದಲ್ಲಿನ ಬದಲಾವಣೆಗೆ ಬೇಡಿಕೆಯ ಪ್ರತಿಕ್ರಿಯೆಯನ್ನು ಬೇಡಿಕೆಯ ಸ್ಥಿತಿಸ್ಥಾಪಕತ್ವ ಎಂದು ವ್ಯಾಖ್ಯಾನಿಸಲಾಗುತ್ತದೆ.**

ಬೇಡಿಕೆ ಸ್ಥಿತಿಸ್ಥಾಪಕತ್ವದ ಪರಿಕಲ್ಪನೆಗಳು (Concepts of elasticity of demand): ಬೇಡಿಕೆಯ ಸ್ಥಿತಿಸ್ಥಾಪಕತ್ವದಲ್ಲಿ ವಿವಿಧ ಪರಿಕಲ್ಪನೆಗಳಿವೆ. ನಾವು ಅವುಗಳಲ್ಲಿ ಮುಖ್ಯವಾಗಿ ಮೂರನ್ನು ಇಲ್ಲಿ ಚರ್ಚಿಸಲಿದ್ದೇವೆ. ಅವುಗಳೆಂದರೆ,

1. ಬೆಲೆ ಬೇಡಿಕೆಯ ಸ್ಥಿತಿಸ್ಥಾಪಕತ್ವ
2. ಆದಾಯ ಬೇಡಿಕೆಯ ಸ್ಥಿತಿಸ್ಥಾಪಕತ್ವ
3. ಅಡ್ಡ(ಛೇದಕ) ಬೇಡಿಕೆಯ ಸ್ಥಿತಿಸ್ಥಾಪಕತ್ವ

1. ಬೆಲೆ ಬೇಡಿಕೆಯ ಸ್ಥಿತಿಸ್ಥಾಪಕತ್ವ (Price elasticity of demand): ನಮಗೆ ತಿಳಿದಿರುವಂತೆ ಬೆಲೆ ಮತ್ತು ಬೇಡಿಕೆ ವಿರುದ್ಧ ಸಂಬಂಧವನ್ನು ಹೊಂದಿವೆ. ಕೆಲವು ಸರಕುಗಳ ಬೆಲೆಯಲ್ಲಿ ಕೇವಲ ಸಣ್ಣ ಬದಲಾವಣೆಯಾದರೂ ಬೇಡಿಕೆಯು ಗಣನೀಯವಾಗಿ ಬದಲಾವಣೆಯಾಗುತ್ತದೆ. ಮತ್ತೊಂದಡೆ, ಕೆಲವು ಸರಕುಗಳ ಬೆಲೆಗಳಲ್ಲಿನ ಬದಲಾವಣೆಯಿಂದ ಬೇಡಿಕೆಗೆ ಯಾವುದೇ ಪರಿಣಾಮವಾಗುವುದಿಲ್ಲ. ಅಂದರೆ, ಕೆಲವು ಸರಕುಗಳ ಬೆಲೆಯಲ್ಲಿನ ಬದಲಾವಣೆಗೆ ಅವುಗಳ ಬೇಡಿಕೆಯು ಹೆಚ್ಚು ಪ್ರತಿಕ್ರಿಯೆಯನ್ನು ಸೂಚಿಸುತ್ತದೆ. ಮತ್ತೆ ಕೆಲವು ಸರಕುಗಳ ಬೆಲೆಯಲ್ಲಿನ ಬದಲಾವಣೆಗೆ ಬೇಡಿಕೆಯು ಪ್ರತಿಕ್ರಿಯಿಸುವುದಿಲ್ಲ. ಆದುದರಿಂದ **ಒಂದು ಸರಕಿನ ಬೆಲೆಯಲ್ಲಾಗುವ ಬದಲಾವಣೆಗೆ ಅದರ ಬೇಡಿಕೆಯ ಪ್ರತಿಕ್ರಿಯೆಯನ್ನು ಮಾಪನ ಮಾಡುವುದನ್ನು ಬೆಲೆ ಬೇಡಿಕೆಯ ಸ್ಥಿತಿಸ್ಥಾಪಕತ್ವ ಎನ್ನುತ್ತಾರೆ.** ಅಂದರೆ, ಬೆಲೆಯಲ್ಲಾದ ಬದಲಾವಣೆಗೆ ತಕ್ಕಂತೆ ಬೇಡಿಕೆ ಪ್ರಮಾಣದಲ್ಲಾಗುವ ಬದಲಾವಣೆಯನ್ನು ಇದು ತಿಳಿಸುತ್ತದೆ. ಇದನ್ನು ಬೇಡಿಕೆಯಲ್ಲಾದ ಶೇಕಡಾವಾರು ಬದಲಾವಣೆಯನ್ನು, ಅದರ ಬೆಲೆಯಲ್ಲಾದ ಶೇಕಡಾವಾರು ಬದಲಾವಣೆಯಿಂದ ಭಾಗಿಸುವ ಮೂಲಕ ಲೆಕ್ಕಾಚಾರ ಮಾಡಲಾಗುತ್ತದೆ. ಅದನ್ನು ಈ ರೀತಿಯಲ್ಲಿ ವ್ಯಕ್ತಪಡಿಸಬಹುದು.

$$\text{ಬೆಲೆ ಬೇಡಿಕೆಯ ಸ್ಥಿತಿಸ್ಥಾಪಕತ್ವ} = \frac{\text{ಸರಕಿನ ಬೇಡಿಕೆಯಲ್ಲಿನ ಶೇಕಡಾವಾರು ಬದಲಾವಣೆ}}{\text{ಸರಕಿನ ಬೆಲೆಯಲ್ಲಿನ ಶೇಕಡಾವಾರು ಬದಲಾವಣೆ}}$$

ಬೆಲೆ ಬೇಡಿಕೆಯ ಸ್ಥಿತಿಸ್ಥಾಪಕತ್ವವನ್ನು ಲೆಕ್ಕಾಚಾರ ಮಾಡುವ ಸರಳೀಕೃತ ಸೂತ್ರವೆಂದರೆ,

$$\text{Ped} = \frac{\Delta q}{\Delta p} \times \frac{p}{q}$$

ಇಲ್ಲಿ, Δp = ಬೆಲೆಯಲ್ಲಿನ ಬದಲಾವಣೆ

Δq = ಬೆಲೆ ಬದಲಾವಣೆಯ ಕಾರಣದಿಂದಾಗಿ ಬೇಡಿಕೆಯಲ್ಲಿನ ಬದಲಾವಣೆ

P = ಪ್ರಾರಂಭದ ಬೆಲೆ

q = ಪ್ರಾರಂಭದ ಬೇಡಿಕೆಯ ಪ್ರಮಾಣ

Ped = ಬೆಲೆ ಬೇಡಿಕೆಯ ಸ್ಥಿತಿಸ್ಥಾಪಕತ್ವ

ಸಮಸ್ಯೆ : ಈರುಳ್ಳಿಯ ಬೆಲೆಯು ಪ್ರತಿ ಕೆ.ಜಿ.ಗೆ ರೂ. 10 ರಿಂದ ರೂ. 12 ಕ್ಕೆ ಹೆಚ್ಚಳವಾಗಿದೆ, ಆಗ ಅದರ ಬೇಡಿಕೆಯ ಪ್ರಮಾಣವು 10 ಕೆ.ಜಿ.ಗಳಿಂದ 8 ಕೆ.ಜಿ.ಗಳಿಗೆ ಇಳಿಕೆಯಾಗಿದೆ ಎಂದು ಭಾವಿಸೋಣ. ಹಾಗಾದರೆ ಬೆಲೆ ಬೇಡಿಕೆಯ ಸ್ಥಿತಿಸ್ಥಾಪಕತ್ವವನ್ನು ಲೆಕ್ಕಾಚಾರ ಮಾಡಿರಿ.

ಪರಿಹಾರ : $\Delta p = 12 - 10 = 2$

$\Delta q = 8 - 10 = -2$

$P = 10$

$q = 10$

ಆಗ, $$\text{Ped} = \frac{\Delta q}{\Delta p} \times \frac{p}{q} = \frac{-2}{2} \times \frac{10}{10} = -1$$

ಈರುಳ್ಳಿಯ ಬೆಲೆ ಬೇಡಿಕೆ ಸ್ಥಿತಿಸ್ಥಾಪಕತ್ವವು 1 ಆಗಿದೆ.

ಮುಖ್ಯವಾಗಿ ನೆನಪಿಡಬೇಕಾದುದೆಂದರೆ ಬೆಲೆ ಬೇಡಿಕೆ ಸ್ಥಿತಿಸ್ಥಾಪಕತ್ವವು ಒಂದು ಸಂಖ್ಯೆಯಾಗಿದೆ. ಅದು ಬೆಲೆ ಮತ್ತು ಬೇಡಿಕೆಯನ್ನು ಸ್ವತಂತ್ರ ಘಟಕಗಳಾಗಿ ಮಾಪನಮಾಡುತ್ತದೆ. ಸಾಮಾನ್ಯವಾಗಿ ಬೆಲೆ ಮತ್ತು ಬೇಡಿಕೆಯ ನಡುವೆ ವಿರುದ್ಧ ಸಂಬಂಧವಿರುವುದರಿಂದ ಬೆಲೆ ಬೇಡಿಕೆ ಸ್ಥಿತಿಸ್ಥಾಪಕತ್ವವು ಒಂದು ಋಣ ಸಂಖ್ಯೆಯಾಗಿರುತ್ತದೆ. ಹೀಗಿದ್ದರೂ ಬೆಲೆ ಬೇಡಿಕೆಯ ಸ್ಥಿತಿಸ್ಥಾಪಕತ್ವದ ವಿಶ್ಲೇಷಣೆಯಲ್ಲಿ ಕೇವಲ ಪೂರ್ಣಸಂಖ್ಯೆಯನ್ನು ಪರಿಗಣಿಸಲಾಗುತ್ತದೆ. ಎರಡು ಸ್ಥಿತಿಸ್ಥಾಪಕತ್ವಗಳನ್ನು ಅವುಗಳ ಪೂರ್ಣ ಮೌಲ್ಯಗಳೊಂದಿಗೆ ಹೋಲಿಕೆಮಾಡುವುದು ಒಂದು ವಿಶ್ವವ್ಯಾಪಿ ಸಂಗತಿಯಾಗಿದೆ. ಆದುದರಿಂದ ಇಲ್ಲಿ ಋಣ ಚಿನ್ಹೆಯನ್ನು ಕಡೆಗಣಿಸಲಾಗಿದೆ.

ಬೆಲೆ ಬೇಡಿಕೆ ಸ್ಥಿತಿಸ್ಥಾಪಕತ್ವದ ವರ್ಗೀಕರಣ (Classification of price elasticity of demand)**:** ಬೆಲೆ ಬೇಡಿಕೆ ಸ್ಥಿತಿಸ್ಥಾಪಕತ್ವದ ಶ್ರೇಣಿಯು ಒಂದು ಸರಕಿನಿಂದ ಮತ್ತೊಂದಕ್ಕೆ ಬದಲಾಗುತ್ತದೆ. ಇದರ ಆಧಾರದ ಮೇಲೆ ಬೆಲೆ ಬೇಡಿಕೆ ಸ್ಥಿತಿಸ್ಥಾಪಕತ್ವವನ್ನು ಈ ಮುಂದಿನಂತೆ ವರ್ಗೀಕರಿಸಬಹುದಾಗಿದೆ.

1. ಪರಿಪೂರ್ಣ ಸ್ಥಿತಿಸ್ಥಾಪಕ ಬೇಡಿಕೆ (Perfectly elastic demand) **:** ಬೆಲೆ ಬೇಡಿಕೆ ಸ್ಥಿತಿಸ್ಥಾಪಕತ್ವವು ಅನಿಯಮಿತ ಅಥವಾ ಅನಂತವಾಗಿದ್ದರೆ (Ped = ∞), ಆಗ ಅದನ್ನು **ಪರಿಪೂರ್ಣ ಸ್ಥಿತಿಸ್ಥಾಪಕ ಬೇಡಿಕೆ ಅಥವಾ ಅನಂತ ಸ್ಥಿತಿಸ್ಥಾಪಕ ಬೇಡಿಕೆ** ಎನ್ನುತ್ತಾರೆ. ಈ ಪ್ರಕರಣದಲ್ಲಿ ಬೆಲೆಯಲ್ಲಿನ ಒಂದು ಸಣ್ಣ ಬದಲಾವಣೆಯು ಬೇಡಿಕೆಯಲ್ಲಿ ಅನಂತ ಬದಲಾವಣೆಗೆ ದಾರಿಮಾಡಿಕೊಡುತ್ತದೆ. ಇಲ್ಲಿ ಬೇಡಿಕೆಯ ರೇಖೆಯು ox ಅಕ್ಷಕ್ಕೆ ಸಮಾನಾಂತರವಾಗಿರುತ್ತದೆ.



2. ಪರಿಪೂರ್ಣ ಸ್ಥಿತಿಸ್ಥಾಪಕ ರಹಿತ ಬೇಡಿಕೆ (Perfectly inelastic demand) : ಬೆಲೆ ಬೇಡಿಕೆ ಸ್ಥಿತಿಸ್ಥಾಪಕತ್ವವು ಶೂನ್ಯವಾಗಿದ್ದರೆ (Ped = 0), ಆಗ ಅದನ್ನು **ಪರಿಪೂರ್ಣ ಸ್ಥಿತಿಸ್ಥಾಪಕರಹಿತ ಬೇಡಿಕೆ** ಎನ್ನುತ್ತಾರೆ. ಇಲ್ಲಿ ಬೆಲೆಯಲ್ಲಿ ಯಾವುದೇ ಪ್ರಮಾಣದ ಬದಲಾವಣೆಯಾದರೂ, ಬೇಡಿಕೆಯ ಪ್ರಮಾಣವು ಬದಲಾಗದೆ ಸ್ಥಿರವಾಗಿರುತ್ತದೆ. ಉದಾಹರಣೆಗೆ, ಬೆಲೆಯಲ್ಲಿ ಶೇ. 10ರಷ್ಟು ಹೆಚ್ಚಾಗಲೀ ಅಥವಾ ಕಡಿಮೆಯಾಗಲೀ ಬೇಡಿಕೆಯ ಪ್ರಮಾಣದಲ್ಲಿ ಯಾವುದೇ ಬದಲಾವಣೆಯಾಗುವುದಿಲ್ಲ. ಇಲ್ಲಿ ಬೇಡಿಕೆಯ ರೇಖೆಯು ಲಂಬರೇಖೆಯಾಗಿರುತ್ತದೆ.



3. ಹೆಚ್ಚು ಸ್ಥಿತಿಸ್ಥಾಪಕ ಅಥವಾ ಸಾಪೇಕ್ಷ ಸ್ಥಿತಿಸ್ಥಾಪಕ ಬೇಡಿಕೆ (More elastic or relatively elastic demand) : ಬೆಲೆ ಬೇಡಿಕೆ ಸ್ಥಿತಿಸ್ಥಾಪಕತ್ವವು 1 ಕ್ಕಿಂತ ಹೆಚ್ಚಾಗಿದ್ದರೆ (Ped > 1), ಆಗ ಅದನ್ನು **ಹೆಚ್ಚು ಸ್ಥಿತಿಸ್ಥಾಪಕ ಬೇಡಿಕೆ** ಎನ್ನುತ್ತಾರೆ. ಇಲ್ಲಿ ಬೆಲೆಯಲ್ಲಿನ ಶೇಕಡಾವಾರು ಬದಲಾವಣೆಗಿಂತ ಬೇಡಿಕೆಯ ಶೇಕಡಾವಾರು ಬದಲಾವಣೆಯು ಹೆಚ್ಚಾಗಿರುತ್ತದೆ. ಉದಾಹರಣೆಗೆ, ಬೆಲೆಯಲ್ಲಿ ಶೇ. 10ರಷ್ಟು ಬದಲಾವಣೆಯಾದರೆ, ಆಗ ಬೇಡಿಕೆಯ ಪ್ರಮಾಣದಲ್ಲಿ ಶೇ. 15ರಷ್ಟು ಬದಲಾವಣೆಯಾಗುತ್ತದೆ. ಇಲ್ಲಿ ಬೇಡಿಕೆಯ ರೇಖೆಯ ಇಳಿಜಾರು ಕಡಿಮೆಯಿರುತ್ತದೆ.



4. ಸಮ ಸ್ಥಿತಿಸ್ಥಾಪಕ ಬೇಡಿಕೆ (Unitary elastic demand): ಬೆಲೆ ಬೇಡಿಕೆಯ ಸ್ಥಿತಿಸ್ಥಾಪಕತ್ವವು 1ಕ್ಕೆ ಸಮನಾಗಿದ್ದರೆ (Ped = 1), ಆಗ ಅದನ್ನು **ಸಮ ಸ್ಥಿತಿಸ್ಥಾಪಕ ಬೇಡಿಕೆ** ಎನ್ನುತ್ತಾರೆ. ಈ ಪ್ರಕರಣದಲ್ಲಿ ಬೆಲೆಯಲ್ಲಿನ ಶೇಕಡಾವಾರು ಬದಲಾವಣೆ ಮತ್ತು ಬೇಡಿಕೆಯ ಪ್ರಮಾಣದಲ್ಲಿನ ಶೇಕಡಾವಾರು ಬದಲಾವಣೆಗಳೆರಡೂ ಸಮನಾಗಿರುತ್ತವೆ. ಉದಾಹರಣೆಗೆ, ಬೆಲೆಯಲ್ಲಿ ಶೇ. 10 ರಷ್ಟು ಬದಲಾವಣೆಯಾದ ಕಾರಣದಿಂದಾಗಿ ಬೇಡಿಕೆಯ ಪ್ರಮಾಣದಲ್ಲಿ ಶೇ. 10ರಷ್ಟು ಬದಲಾವಣೆ ಯಾಗುತ್ತದೆ. ಇಲ್ಲಿ ಬೇಡಿಕೆಯ ರೇಖೆಯು ಆಯತಾಕಾರದ ಪರ ವಲಯವಾಗಿರುತ್ತದೆ.



5. ಕಡಿಮೆ ಸ್ಥಿತಿಸ್ಥಾಪಕ ಅಥವಾ ಸಾಪೇಕ್ಷ ಸ್ಥಿತಿಸ್ಥಾಪಕ ರಹಿತ ಬೇಡಿಕೆ (Less elastic or relatively inelastic demand) : ಬೆಲೆ ಬೇಡಿಕೆ ಸ್ಥಿತಿಸ್ಥಾಪಕತ್ವವು 1 ಕ್ಕಿಂತ ಕಡಿಮೆಯಿದ್ದರೆ (Ped < 1), ಆಗ ಅದನ್ನು **ಕಡಿಮೆ ಸ್ಥಿತಿಸ್ಥಾಪಕ ಬೇಡಿಕೆ** ಎನ್ನುತ್ತಾರೆ. ಇಲ್ಲಿ ಬೆಲೆಯಲ್ಲಿನ ಶೇಕಡಾವಾರು ಬದಲಾವಣೆಗಿಂತ ಬೇಡಿಕೆಯಲ್ಲಿನ ಶೇಕಡಾವಾರು ಬದಲಾವಣೆಯು ಕಡಿಮೆಯಿರುತ್ತದೆ. ಉದಾಹರಣೆಗೆ, ಬೆಲೆಯಲ್ಲಿ ಶೇ. 10ರಷ್ಟು ಬದಲಾವಣೆಯಾದಾಗ, ಬೇಡಿಕೆಯ ಪ್ರಮಾಣದಲ್ಲಿ ಶೇ. 5ರಷ್ಟು ಬದಲಾವಣೆಯಾಗುತ್ತದೆ. ಇಲ್ಲಿ ಬೇಡಿಕೆಯ ರೇಖೆಯು ಹೆಚ್ಚು ಕಡಿದಾಗಿರುತ್ತದೆ.



ಬೆಲೆ ಬೇಡಿಕೆ ಸ್ಥಿತಿಸ್ಥಾಪಕತ್ವದ ಸೂತ್ರದ ನಿರೂಪಣೆ

ಬೆಲೆ ಬೇಡಿಕೆ ಸ್ಥಿತಿಸ್ಥಾಪಕತ್ವದ ಸೂತ್ರವು Ped = $\frac{\Delta q}{\Delta p} \times \frac{p}{q}$ ಆಗಿದೆ. ಇದು ಹೇಗೆ ಬಂದಿದೆ ಎಂಬುದು ನಿಮಗೆ ತಿಳಿದಿದೆಯೇ? ಬೆಲೆ ಬೇಡಿಕೆ ಸ್ಥಿತಿಸ್ಥಾಪಕತ್ವದ ವ್ಯಾಖ್ಯಾನದ ಪ್ರಕಾರ, ಸರಕಿನ ಬೇಡಿಕೆಯಲ್ಲಿನ ಶೇಕಡಾವಾರು ಬದಲಾವಣೆಯನ್ನು ಅದರ ಬೆಲೆಯಲ್ಲಿನ ಶೇಕಡಾವಾರು ಬದಲಾವಣೆಯಿಂದ ಭಾಗಿಸುವ ಮೂಲಕ ನಾವು ಬೆಲೆ ಬೇಡಿಕೆ ಸ್ಥಿತಿಸ್ಥಾಪಕತ್ವವನ್ನು ಲೆಕ್ಕಾಚಾರ ಮಾಡಬಹುದು. ಇದನ್ನು ಈ ಮುಂದಿನಂತೆ ವ್ಯಕ್ತಪಡಿಸಬಹುದು.

$$\text{ಬೆಲೆ ಬೇಡಿಕೆಯ ಸ್ಥಿತಿಸ್ಥಾಪಕತ್ವ} = \frac{\text{ಸರಕಿನ ಬೇಡಿಕೆಯಲ್ಲಿನ ಶೇಕಡಾವಾರು ಬದಲಾವಣೆ}}{\text{ಸರಕಿನ ಬೆಲೆಯಲ್ಲಿನ ಶೇಕಡಾವಾರು ಬದಲಾವಣೆ}}$$

ರೇಖಾನಕ್ಷೆಯನ್ನು ಗಮನಿಸಿ, P ಬೆಲೆಯಲ್ಲಿ ಬೇಡಿಕೆಯ ಪ್ರಮಾಣವು q ಆಗಿದೆ. ಬೆಲೆಯು P ಯಿಂದ p^1ಗೆ ಬದಲಾಗಿದೆ. ಆಗ ಬೇಡಿಕೆಯ ಪ್ರಮಾಣವು q ಯಿಂದ q^1ಗೆ ಬದಲಾವಣೆಯಾಗಿದೆ. ಆದುದರಿಂದ ಬೆಲೆಯಲ್ಲಿನ ಬದಲಾವಣೆಯು Δp ಆಗಿದೆ. ಅಂದರೆ $p^1 - p$. ಬೇಡಿಕೆ ಪ್ರಮಾಣದಲ್ಲಿನ ಬದಲಾವಣೆಯು Δq ಆಗಿದೆ. ಅಂದರೆ $q^1 - q$.



ರೇಖಾಚಿತ್ರ 3.5 : ಬೆಲೆ ಬೇಡಿಕೆ ಸ್ಥಿತಿಸ್ಥಾಪಕತ್ವ ರೇಖೆ

ಬೆಲೆಯಲ್ಲಿನ ಶೇಕಡಾವಾರು ಬದಲಾವಣೆ = $\frac{\Delta p}{p} \times 100$

ಬೇಡಿಕೆಯ ಪ್ರಮಾಣದಲ್ಲಿನ ಶೇಕಡಾವಾರು ಬದಲಾವಣೆ = $\frac{\Delta q}{q} \times 100$

ಆದುದರಿಂದ, Ped = $\dfrac{\frac{\Delta q}{q} \times 100}{\frac{\Delta p}{p} \times 100}$. ಸಮಾನ ಅಂಶಗಳನ್ನು ತೆಗೆದಿದೆ, ಆಗ,

= $\dfrac{\frac{\Delta q}{q}}{\frac{\Delta p}{p}}$, ಲಭ್ಯವಾಗುತ್ತದೆ. $\frac{\Delta q}{q}$ ಅನ್ನು $\frac{\Delta p}{p}$ ಯಿಂದ ಭಾಗಿಸಿದಾಗ

= $\frac{\Delta q}{\Delta p} \times \frac{p}{q}$ ಲಭ್ಯವಾಗುತ್ತದೆ.

$$\therefore \text{Ped} = \frac{\Delta q}{\Delta p} \times \frac{p}{q}$$

ಬೆಲೆ ಬೇಡಿಕೆ ಸ್ಥಿತಿಸ್ಥಾಪಕತ್ವ ಮತ್ತು ವೆಚ್ಚ (Price elasticity of demand and expenditure): ಪ್ರೊ. ಮಾರ್ಷಲ್‌ರವರು ಬೆಲೆ ಬೇಡಿಕೆ ಸ್ಥಿತಿಸ್ಥಾಪತ್ವವನ್ನು ಮಾಪನ ಮಾಡಲು ಈ ವಿಧಾನವನ್ನು ಸೂಚಿಸಿದ್ದಾರೆ. ಇಲ್ಲಿ ನಾವು ಬೆಲೆ ಬೇಡಿಕೆ ಸ್ಥಿತಿಸ್ಥಾಪಕತ್ವದ ಮಾಪಕವಾಗಿ ಬೆಲೆ ಮತ್ತು ವೆಚ್ಚದ ನಡುವಿನ ಸಂಬಂಧವನ್ನು ಅಧ್ಯಯನ ಮಾಡುತ್ತೇವೆ. ಒಂದು ಸರಕಿನ ಬೆಲೆ ಮತ್ತು ಬೇಡಿಕೆಯ ಪ್ರಮಾಣವನ್ನು ಗುಣಿಸುವ ಮೂಲಕ ಆ ಸರಕಿನ ಮೇಲಿನ ಒಟ್ಟು ವೆಚ್ಚವನ್ನು ಪಡೆಯಬಹುದು. ಬೆಲೆಯ ಬದಲಾವಣೆಗೆ ಮುಂಚಿತವಾಗಿ ಮತ್ತು ನಂತರದಲ್ಲಿ ಅನುಭೋಗಿಯೊಬ್ಬನ ಒಟ್ಟು ವೆಚ್ಚವನ್ನು ಹೋಲಿಕೆ ಮಾಡುವ ಮೂಲಕ, ಒಂದು ಸರಕಿಗೆ ಅವನ ಬೇಡಿಕೆಯು ಹೆಚ್ಚು ಸ್ಥಿತಿಸ್ಥಾಪಕತ್ವ ಹೊಂದಿದೆಯೋ, ಸ್ಥಿರ ಸ್ಥಿತಿಸ್ಥಾಪಕತ್ವ ಹೊಂದಿದೆಯೋ ಅಥವಾ ಕಡಿಮೆ ಸ್ಥಿತಿಸ್ಥಾಪಕತ್ವ ಹೊಂದಿದೆಯೋ ಎಂಬುದನ್ನು ತಿಳಿಯಬಹುದು. ಇದು ಬೆಲೆ ಬೇಡಿಕೆಯ ಸ್ಥಿತಿಸ್ಥಾಪಕತ್ವವನ್ನು ಮಾಪನಮಾಡುವ ಒಂದು ಸರಳ ವಿಧಾನವಾಗಿದೆ.

ಕೋಷ್ಟಕ: 3.3 ಬೆಲೆ ಬೇಡಿಕೆ ಸ್ಥಿತಿಸ್ಥಾಪಕತ್ವ ಮತ್ತು ವೆಚ್ಚ

ಕಿತ್ತಳೆ ಹಣ್ಣಿನ ಬೆಲೆ (ಪ್ರತಿ ಕೆ.ಜಿ.ಗೆ ರೂ.)	ಬೇಡಿಕೆಯ ಪ್ರಮಾಣ (ಕೆ.ಜಿ.ಗಳಲ್ಲಿ)	ಒಟ್ಟು ವೆಚ್ಚ (ರೂ. ಗಳಲ್ಲಿ)	ಬೆಲೆ ಬೇಡಿಕೆಯ ಸ್ಥಿತಿಸ್ಥಾಪಕತ್ವ
70	2	140	Ped > 1
60	3	180	
50	4	200	Ped = 1
40	5	200	
30	6	180	Ped < 1
20	7	140	

ಬೆಲೆಯಲ್ಲಿನ ಬದಲಾವಣೆಗೆ ವಿರುದ್ಧ ದಿಕ್ಕಿನಲ್ಲಿ ವೆಚ್ಚದಲ್ಲಿ ಬದಲಾವಣೆಯಾದರೆ, ಸ್ಥಿತಿಸ್ಥಾಪಕತ್ವವು ಒಂದಕ್ಕಿಂತ ಹೆಚ್ಚು ಇರುತ್ತದೆ (Ped > 1), ಮತ್ತು ಅದನ್ನು ಹೆಚ್ಚು ಸ್ಥಿತಿಸ್ಥಾಪಕ ಬೇಡಿಕೆ ಎನ್ನುತ್ತೇವೆ. ಇದರ ಅರ್ಥ, ಬೆಲೆ ಕಡಿಮೆ ಯಾದಾಗ ಒಟ್ಟು ವೆಚ್ಚ ಹೆಚ್ಚಾಗುತ್ತದೆ ಮತ್ತು ಇದರ ಪ್ರತಿಕ್ರಮವೂ ಹೀಗೆ ಇರುತ್ತದೆ(Vice-versa). ಉದಾಹರಣೆಗೆ, ಕೋಷ್ಟಕ–3.3ನ್ನು ಗಮನಿಸಿ, ಕಿತ್ತಲೆ ಹಣ್ಣಿನ ಬೆಲೆಯು ಪ್ರತಿ ಕೆ.ಜಿ.ಗೆ ರೂ. 70 ರಿಂದ 60ಕ್ಕೆ ಇಳಿದಾಗ, ಅನುಭೋಗಿ ಯೊಬ್ಬನ ಒಟ್ಟು ವೆಚ್ಚವು ರೂ. 140 ರಿಂದ ರೂ. 180ಕ್ಕೆ ಏರಿಕೆಯಾಗಿದೆ.

ಬೆಲೆಯಲ್ಲಿ ಏರಿಕೆ ಅಥವಾ ಇಳಿಕೆಯಾದಾಗ, ಒಟ್ಟು ವೆಚ್ಚವು ಬದಲಾಗದೆ ಸ್ಥಿರವಾಗಿದ್ದರೆ, ಬೇಡಿಕೆ ಸ್ಥಿತಿಸ್ಥಾಪಕತ್ವವು ಒಂದಕ್ಕೆ ಸಮನಾಗಿರುತ್ತದೆ (Ped = 1). ಇದನ್ನು ಸಮ ಸ್ಥಿತಿಸ್ಥಾಪಕ ಬೇಡಿಕೆ ಎನ್ನುತ್ತೇವೆ. ಉದಾ ಹರಣೆಗೆ, ಬೆಲೆಯು ಪ್ರತಿ ಕೆ.ಜಿಗೆ ರೂ. 50 ರಿಂದ ರೂ. 40ಕ್ಕೆ ಇಳಿಕೆಯಾಗಲಿ ಅಥವಾ ರೂ. 40 ರಿಂದ ರೂ. 50ಕ್ಕೆ ಏರಿಕೆಯಾಗಲೀ, ಒಟ್ಟು ವೆಚ್ಚವು ರೂ. 200ರಲ್ಲಿ ಬದಲಾಗದೆ ಸ್ಥಿರವಾಗಿದೆ.

ಬೆಲೆಯಲ್ಲಿನ ಬದಲಾವಣೆ ಮತ್ತು ವೆಚ್ಚದಲ್ಲಿನ ಬದಲಾವಣೆಗಳು ಒಂದೇ ದಿಕ್ಕಿನಲ್ಲಿದ್ದರೆ, ಸ್ಥಿತಿಸ್ಥಾಪಕತ್ವವು ಒಂದಕ್ಕಿಂತ ಕಡಿಮೆಯಿರುತ್ತದೆ (Ped < 1), ಮತ್ತು ಅದನ್ನು ಕಡಿಮೆ ಸ್ಥಿತಿಸ್ಥಾಪಕ ಬೇಡಿಕೆ ಎನ್ನುತ್ತೇವೆ. ಇದರ ಅರ್ಥ, ಬೆಲೆಯಲ್ಲಿನ ಇಳಿಕೆಯು ಒಟ್ಟು ವೆಚ್ಚದಲ್ಲಿನ ಇಳಿಕೆಗೆ ದಾರಿಮಾಡಿಕೊಡುತ್ತದೆ ಮತ್ತು ಬೆಲೆಯಲ್ಲಿನ ಏರಿಕೆಯು ಒಟ್ಟು ವೆಚ್ಚದ ಹೆಚ್ಚಳಕ್ಕೆ ದಾರಿಮಾಡುತ್ತದೆ. ಉದಾಹರಣೆಗೆ, ಬೆಲೆಯು ಪ್ರತಿ ಕೆ.ಜಿಗೆ ರೂ. 30 ರಿಂದ ರೂ. 20ಕ್ಕೆ ಇಳಿಕೆಯಾದಾಗ, ಒಟ್ಟು ವೆಚ್ಚವು ರೂ. 180 ರಿಂದ ರೂ. 140ಕ್ಕೆ ಇಳಿಕೆಯಾಗಿದೆ ಮತ್ತು ಬೆಲೆಯು ರೂ. 20 ರಿಂದ ರೂ. 30ಕ್ಕೆ ಹೆಚ್ಚಳವಾದಾಗ, ಒಟ್ಟು ವೆಚ್ಚವೂ ಸಹ ರೂ. 140 ರಿಂದ ರೂ. 180ಕ್ಕೆ ಹೆಚ್ಚಳವಾಗಿದೆ.

ಬೆಲೆ ಬೇಡಿಕೆ ಸ್ಥಿತಿಸ್ಥಾಪಕತ್ವವನ್ನು ನಿರ್ಧರಿಸುವ ಅಂಶಗಳು (Factors determining price elasticity of demand): ಬೆಲೆ ಬೇಡಿಕೆ ಸ್ಥಿತಿಸ್ಥಾಪಕತ್ವವು ಹಲವಾರು ಅಂಶಗಳನ್ನು ಅವಲಂಬಿಸಿದೆ. ಅವುಗಳಲ್ಲಿ ಬಹುಮುಖ್ಯವಾದುವುಗಳೆಂದರೆ,

1) **ಸರಕುಗಳ ಸ್ವರೂಪ :** ಒಂದು ಸರಕಿನ ಬೆಲೆ ಬೇಡಿಕೆ ಸ್ಥಿತಿಸ್ಥಾಪಕತ್ವವು ಆ ಸರಕಿನ ಸ್ವರೂಪವನ್ನು ಅವಲಂಬಿಸಿದೆ. ಉದಾಹರಣೆಗೆ ಆವಶ್ಯಕ ಸರಕುಗಳಾದ ಅಕ್ಕಿ, ಗೋದಿ, ಸಕ್ಕರೆ, ಹಾಲು ಮುಂತಾದುವು ಜೀವನಕ್ಕೆ ಅಗತ್ಯವಾಗಿವೆ. ಈ ಸರಕುಗಳ ಬೆಲೆಯಲ್ಲಿನ ಬದಲಾವಣೆಗೆ ಪ್ರತಿಕ್ರಿಯೆಯಾಗಿ ಬೇಡಿಕೆಯಲ್ಲಿ ಹೆಚ್ಚಿನ ಬದಲಾವಣೆಯಾಗುವುದಿಲ್ಲ. ಅವುಗಳ ಬೇಡಿಕೆಯು ಕಡಿಮೆ ಸ್ಥಿತಿಸ್ಥಾಪಕತ್ವವನ್ನು ಹೊಂದಿದೆ. ಮತ್ತೊಂದೆಡೆ, ಐಶಾರಾಮಿ ಸರಕುಗಳ ಬೇಡಿಕೆಯು ಬೆಲೆಯ ಬದಲಾವಣೆಗೆ ಹೆಚ್ಚು ಪ್ರತಿಕ್ರಿಯೆ ತೋರಿಸಬಹುದು. ಆದುದರಿಂದ ಅವುಗಳ ಬೇಡಿಕೆಯು ಹೆಚ್ಚು ಸ್ಥಿತಿಸ್ಥಾಪಕತ್ವವನ್ನು ಹೊಂದಿದೆ.

2) **ಬದಲೀ ಸರಕುಗಳ ಲಭ್ಯತೆ :** ಹತ್ತಿರದ ಬದಲೀ ಸರಕುಗಳು ಲಭ್ಯವಾಗುವಂತಿದ್ದರೆ, ಬೇಡಿಕೆಯು ಹೆಚ್ಚು ಸ್ಥಿತಿಸ್ಥಾಪಕತ್ವವನ್ನು ಹೊಂದಿರುತ್ತದೆ. ಏಕೆಂದರೆ, ಜನರು ಬದಲೀ ಸರಕುಗಳ ಬೆಲೆಗಳನ್ನು ಹೋಲಿಕೆ ಮಾಡುತ್ತಾರೆ ಮತ್ತು ಅವುಗಳಲ್ಲಿ ಕಡಿಮೆ ಬೆಲೆಯ ಸರಕನ್ನು ಕೊಳ್ಳುತ್ತಾರೆ. ಉದಾಹರಣೆಗೆ, ಕೆಲವು ಆಹಾರ ಸರಕುಗಳು, ಸೋಪುಗಳು, ಟೂತ್‌ಪೇಸ್ಟುಗಳು ಇತ್ಯಾದಿ. ಒಂದು ಸರಕಿಗೆ ಬದಲೀ ಸರಕು ಇಲ್ಲದಿದ್ದರೆ, ಬೇಡಿಕೆಯು ಸ್ಥಿತಿಸ್ಥಾಪಕತ್ವರಹಿತವಾಗಿರುತ್ತದೆ. ಉದಾಹರಣೆಗೆ ಈರುಳ್ಳಿ, ಉಪ್ಪು, ಬೆಂಕಿಪೊಟ್ಟಣ ಇತ್ಯಾದಿ.

3) **ಅನುಭೋಗಿಯ ಆದಾಯ :** ಬಡಜನರು ಕಡಿಮೆ ಆದಾಯ ಹೊಂದಿರುತ್ತಾರೆ. ಅವರ ಬೇಡಿಕೆಯು ಹೆಚ್ಚು ಸ್ಥಿತಿಸ್ಥಾಪಕತ್ವವನ್ನು ಹೊಂದಿರುವುದು. ಮತ್ತೊಂದೆಡೆ, ಶ್ರೀಮಂತ ಜನರು ಸಾಕಷ್ಟು ಹಣ ಹೊಂದಿರುತ್ತಾರೆ ಮತ್ತು ಅವರ ಬೇಡಿಕೆಯು ಸ್ಥಿತಿಸ್ಥಾಪಕರಹಿತವಾಗಿರುತ್ತದೆ. ಏಕೆಂದರೆ, ಅವರು ಯಾವುದೇ ಬೆಲೆಯಲ್ಲಿ ಸರಕುಗಳನ್ನು ಕೊಳ್ಳಲು ಸಿದ್ಧರಿರುತ್ತಾರೆ.

4) **ಅಭ್ಯಾಸ :** ಜನರು ಒಂದು ನಿರ್ದಿಷ್ಟ ಸರಕನ್ನು ಬಳಸುವ ಅಭ್ಯಾಸ ಹೊಂದಿದ್ದರೆ, ಅವರು ಬೆಲೆಯಲ್ಲಿನ ಬದಲಾವಣೆಗೆ ಗಮನಕೊಡುವುದಿಲ್ಲ. ಇಂತಹ ಪ್ರಕರಣದಲ್ಲಿ ಬೇಡಿಕೆಯು ಕಡಿಮೆ ಸ್ಥಿತಿಸ್ಥಾಪಕತ್ವವನ್ನು ಹೊಂದಿರುತ್ತದೆ.

5) **ಸರಕುಗಳ ಬೆಲೆ :** ಅತಿಹೆಚ್ಚು ಬೆಲೆಯ ಸರಕುಗಳು ಅಥವಾ ಅತಿಕಡಿಮೆ ಬೆಲೆಯ ಸರಕುಗಳು ಕಡಿಮೆ ಬೇಡಿಕೆ ಸ್ಥಿತಿಸ್ಥಾಪಕತ್ವವನ್ನು ಹೊಂದಿರುತ್ತವೆ. ಈ ಸರಕುಗಳ ಬೆಲೆಗಳಲ್ಲಿನ ಅಲ್ಪ ಬದಲಾವಣೆಯು, ಅವುಗಳ ಬೇಡಿಕೆಯ ಮೇಲೆ ಪರಿಣಾಮ ಬೀರುವುದಿಲ್ಲ.

6) **ವಿವಿಧ ಉಪಯೋಗಗಳು :** ಒಂದು ಸರಕು ವಿವಿಧ ಅಥವಾ ಬಹುವಿಧ ಉಪಯೋಗಗಳನ್ನು ಹೊಂದಿದ್ದರೆ, ಅದರ ಬೇಡಿಕೆಯು ಸ್ಥಿತಿಸ್ಥಾಪಕತ್ವವನ್ನು ಹೊಂದಿರುತ್ತದೆ. ಏಕೆಂದರೆ, ಬೆಲೆ ಕಡಿಮೆಯಾದಾಗ ಆ ಸರಕನ್ನು ಹಲವು ಉದ್ದೇಶಗಳಿಗೆ ಬಳಸಲಾಗುತ್ತದೆ. ಉದಾಹರಣೆಗೆ ಹಾಲು, ಕಲ್ಲಿದ್ದಲು, ಉಕ್ಕು, ವಿದ್ಯುತ್ ಇತ್ಯಾದಿ. ಆದರೆ ಒಂದು ಸರಕು ಕೇವಲ ಒಂದೇ ಉಪಯೋಗ ಹೊಂದಿದ್ದರೆ, ಅದರ ಬೇಡಿಕೆಯು ಸ್ಥಿತಿಸ್ಥಾಪಕತ್ವ ರಹಿತವಾಗಿರುತ್ತದೆ. ಏಕೆಂದರೆ, ಬೆಲೆ ಏನೇ ಆಗಿರಲಿ, ನಿರ್ದಿಷ್ಟ ಒಂದೇ ಉದ್ದೇಶಕ್ಕಾಗಿ ಕೊಳ್ಳಲೇಬೇಕಾಗುತ್ತದೆ. ಉದಾಹರಣೆಗೆ, ರಸಗೊಬ್ಬರ, ಸುಧಾರಿತ ಬೀಜಗಳು, ತಿನಿಸುಗಳು ಇತ್ಯಾದಿ.

7) **ಮುಂದೂಡಿದ ಅನುಭೋಗ :** ಒಂದು ನಿರ್ದಿಷ್ಟ ಸರಕಿನ ಅನುಭೊಗವನ್ನು ಮುಂದೂಡಲು ಸಾಧ್ಯವಿದ್ದರೆ, ಅದರ ಬೇಡಿಕೆಯು ಸ್ಥಿತಿಸ್ಥಾಪಕತ್ವ ಹೊಂದಿರುತ್ತದೆ. ಉದಾಹರಣೆಗೆ ಕಾರು, ಟಿ.ವಿ. ಬೈಕು ಇತ್ಯಾದಿ.